ಜನಜಾಗೃತಿ ಮಾಲೆ - ೪

ಮೂಢನಂಬಿಕೆಗಳು

ಬಿ. ಎ. ಮಧು

ಜೀವಿಕ

ಜೀತ ವಿಮುಕ್ತಿ ಕರ್ನಾಟಕ

೧೨೪೯, ಐಸೆಕ್ ರಸ್ತೆ,
ನಾಗರಭಾವಿ ಅಂಚೆ,
ಬೆಂಗಳೂರು - ೫೬೦ ೦೭೨
ದೂರವಾಣಿ: ೩೨೧೦೧೯೪
email: jeevika@vsnl.com

೬ ಡಿಸೆಂಬರ್ ೨೦೦೨

ಪ್ರತಿಗಳು: ೧೦೦೦೦

ಮೂಢನಂಬಿಕೆಗಳ ವಿನಾಶಕ್ಕೆ ಚೆನ್ನೋಟ: ಜೀವಿಕದ ಆಶಯ

ಜೀತ ವಿಮುಕ್ತಿ ಕರ್ನಾಟಕ – ಜೀವಿಕ – ಬಂಧನ ಮುಕ್ತ ಜೀವನ ತನ್ನ ಜನಜಾಗೃತಿ ಮಾಲೆಯಲ್ಲಿ ಮೂಢನಂಬಿಕೆಗಳ ವಿರುದ್ಧ ಸಮರ ಸಾರಲು ಡಿ.ಎ. ಉಪಾಧ್ಯರ 'ಭೀಕರ ಮೌಢ್ಯ' ಮತ್ತು ಬಿ.ಎ.ಮಧುರವರ 'ಮೂಢನಂಬಿಕೆಗಳು' ಎಂಬ ಕಿರುಪುಸ್ತಕಗಳನ್ನು ಪ್ರಕಟಿಸುತ್ತಿದೆ. ಜೀತ ವಿನಾಶದಲ್ಲಿ ಮತ್ತು ಅದಕ್ಕೂ ಮಿಗಿಲಾಗಿ ಬಂಧನ ಮುಕ್ತ ಸಮಗ್ರ ಜೀವನದಲ್ಲಿ ಮೂಢನಂಬಿಕೆಗಳನ್ನು ಗುರುತಿಸಿ ಅವನ್ನು ಹೊರಗೆ ಹಾಕಿ ಅವುಗಳ ಜಾಗದಲ್ಲಿ ಅರ್ಥ ಪೂರ್ಣ ನಿಲುವುಗಳನ್ನೂ ಮೌಲ್ಯಗಳನ್ನೂ ಅಂಗೀಕರಿಸಿ ವೈಚಾರಿಕ ಹಾಗೂ ವೈಜ್ಞಾನಿಕ ಮನೋಭಾವಗಳನ್ನು ರೂಢಿಸಿ ಕೊಳ್ಳುವುದು ಅಗತ್ಯವಾಗಿ ಜರುಗಬೇಕಾದ ಕೆಲಸವಾಗಿದೆ. ಜೀವಿಕ ಬಳಗ ಹಾಗೂ ಅದು ಬೆಂಬಲಿಸುತ್ತಿರುವ ಕರ್ನಾಟಕ ಜೀತದಾಳು ಮತ್ತು ಕೃಷಿ ಕಾರ್ಮಿಕ ಒಕ್ಕೂಟದ ಕೆಲ ಸದಸ್ಯರು ಈಗಾಗಲೇ ತಮ್ಮ ದೈನಂದಿನ ಜೀವನದಲ್ಲಿ ಹಾಸು ಹೊಕ್ಕಿರುವ ವಿವಿಧ ಮೂಢನಂಬಿಕೆಗಳನ್ನು ಗುರುತಿಸಿ ಅವುಗಳನ್ನು ವಿಶ್ಲೇಷಿಸುವ ಕೆಲಸ ಮಾಡುತ್ತಿದ್ದಾರೆ. ಈ ಸಂದರ್ಭದಲ್ಲಿ ಮೇಲೆ ನಮೂದಿಸಿದ ಎರಡು ಪುಸ್ತಿಕೆಗಳ ಪರಿಚಯವಾಗಿ ಅವನ್ನು ತಮ್ಮ ಚರ್ಚಾಕೂಟಗಳಲ್ಲಿ ಈಗಾಗಲೇ ಬಳಸುತ್ತಿದ್ದಾರೆ. ಅವುಗಳ ಪ್ರಯೋಜನ ಇನ್ನೂ ವ್ಯಾಪಕವಾಗಿ ನಮ್ಮ ಕರ್ನಾಟಕದ ಜನರೆಲ್ಲರೂ ಪ್ರತ್ಯೇಕವಾಗಿ ಯುವ ಮಿತ್ರರು ಪಡೆಯಲಿ ಎಂಬ ಉದ್ದೇಶದಿಂದ ಅವನ್ನು ಕಡಿಮೆ ಖರ್ಚಿನಲ್ಲಿ ಹೊರತರುವ ಯೋಜನೆಗೆ ಪುಸ್ತಿಕೆಗಳ ಬರಹಗಾರರು ಒಪ್ಪಿದ್ದಾರೆ. ಅವನ್ನು ಜೀವಿಕವು ಮುದ್ರಿಸಿ ಜನರಿಗೆ ಹಂಚಲಿಕ್ಕೆ ಅನುಮತಿ ನೀಡಿದ್ದಾರೆ. ಅದಕ್ಕೆ ಜೀವಿಕವು ಆಭಾರಿಯಾಗಿದೆ.

ಮೂಢನಂಬಿಕೆಗಳನ್ನು ಗುರುತಿಸಿ ಅವನ್ನು ಕಿತ್ತೊಗೆಯುವಾಗ ಅವುಗಳ ಜಾಗದಲ್ಲಿ ತುಂಬಿಕೊಳ್ಳಬೇಕಾದ ವಿಷಯಗಳಾವುವು? ಒಂದು ಮಾನವತೆಯನ್ನು ಎತ್ತಿಹಿಡಿಯುವ ನ್ಯಾಯ, ಸಮಾನತೆ, ಸ್ವಾತಂತ್ರ್ಯ, ಸೋದರತ್ವದ ನಿಲುವುಗಳು ಅಥವಾ ಮೌಲ್ಯಗಳು. ಅವನ್ನು ವೈಯಕ್ತಿಕ ದೃಷ್ಟಿಕೋನಗಳಲ್ಲೂ ಸಾಮಾಜಿಕ ರಚನೆಗಳಲ್ಲೂ ಪ್ರತಿಪಾದಿಸ ಬೇಕಾಗುತ್ತದೆ. ಜೊತೆಗೆ ಮಾನವ ಜೀವನವನ್ನು ಆವರಿಸಿರುವಂತೆ ತಿಳಿದುಕೊಳ್ಳಲಾದ 'ನಿಗೂಢ ಶಕ್ತಿ'ಗಳ ಬಗ್ಗೆ ಸರಿಯಾದ ಜ್ಞಾನ ಮೂಡಿಬರಬೇಕು. ಈ ನಿಟ್ಟಿನಲ್ಲಿ ವೈಜ್ಞಾನಿಕ ಹಾಗೂ ವೈಚಾರಿಕ ನೋಟಗಳನ್ನು ಬೆಳೆಸಬೇಕಾಗುತ್ತದೆ. ವಿವಿಧ ವಿಜ್ಞಾನಗಳ ತಕ್ಕಮಟ್ಟಿಗಿನ ಜ್ಞಾನದ ಜೊತೆಗೆ 'ಆಧ್ಯಾತ್ಮಿಕತೆ' ಬಗ್ಗೆಯೂ ಸ್ಪಷ್ಟವಾದ ನಿಲುವುಗಳ ಅವಶ್ಯಕತೆ ಇದೆ. ಡಿ.ಎ. ಉಪಾಧ್ಯರವರು ತಮ್ಮ ಪುಸ್ತಿಕೆಯ 'ಅಂತರಂಗದ ಮಾತಿ'ನಲ್ಲಿ "ಈ ಪ್ರಪಂಚದಲ್ಲಿ ಸಾರ್ವತ್ರಿಕವಾದ ಚೇತನಶಕ್ತಿಯೊಂದಿದೆ ಎನ್ನುವುದು ನಿರ್ವಿವಾದ. ಅದಕ್ಕೆ ಮಾತ್ರ ದೇವರೆಂದು ಭಾವಿಸೋಣ" ಎಂಬ ನಿಲುವು ತಾಳುತ್ತಾರೆ. ಪ್ರಪಂಚದಲ್ಲಿ ಸಾರ್ವತ್ರಿಕವಾದ ಚೇತನ ಶಕ್ತಿಯನ್ನು ಒಪ್ಪಿಕೊಳ್ಳೋಣ. ಆದರೆ ಅದನ್ನು 'ದೇವರು' ಎಂದು ಕರೆಯುವುದರಿಂದಲೇ ಅದು

ಮೂಢನಂಬಿಕೆಗಳಿಗೆ ಅನುವು ಮಾಡಿಕೊಡುತ್ತದೆ. ದೇವರು ಮಾತ್ರವಲ್ಲ ಆತ್ಮದಲ್ಲಿಯ ನಂಬಿಕೆಯೂ ಮೌಢ್ಯಕ್ಕೆ ಎಡೆಮಾಡಿಕೊಡುತ್ತದೆ. ಪ್ರಪಂಚದಲ್ಲಿಯಂತೆ ಮನುಷ್ಯ ಜೀವದಲ್ಲೂ ಚೇತನಶಕ್ತಿಯೊಂದಿದೆ. ಆದರೆ ಆ ಚೇತನಶಕ್ತಿಯು ಮಾನವ ದೇಹದಿಂದ ಹೊರತಾದುದಲ್ಲ. ದೇವರು ಮತ್ತು ಆತ್ಮ ಮನುಷ್ಯ ನಿರ್ಮಿತ ಕಲ್ಪನೆಗಳು ಮಾತ್ರ.

ದೇವರು - ಆತ್ಮ ನಂಬಿಕೆಗಳನ್ನು ಜೀವನದಿಂದ ಹೊರಗಿಡುವುದೆಂದರೆ ಮನುಷ್ಯನಲ್ಲಿ ವಿಕಾರ ಗರ್ವ, ಒಣ ಜಂಭ, ಸಂಕುಚಿತಾರ್ಥದ ವೈಚಾರಿಕತೆಗಳಿಗೆ ಎಡೆ ಮಾಡಿ ಕೊಡುವುದು ಎಂದಲ್ಲ. ಪ್ರಪಂಚದ ಪ್ರತಿಯೊಂದು ಜೀವಿ, ವಸ್ತುಗಳ ಬಗ್ಗೆ ವಿಸ್ಮಯತೆ ಹಾಗೂ ಅದ್ಭುತ ಪ್ರಜ್ಞೆ, ತನ್ನ ಮಿತಿಗಳ ಬಗ್ಗೆ ವಾಸ್ತವ ಅರಿವು ಮತ್ತು ತನ್ನ ಹಾಗೂ ಪ್ರಪಂಚದ ಚೇತನಶಕ್ತಿ ಬಗ್ಗೆ ಅಚಲ ವಿಶ್ವಾಸದ ಜೊತೆಗೆ ತನ್ನ ಹಾಗೂ ತನ್ನ ಸಮಾಜ ಮತ್ತು ಪರಿಸರದ ಬಗ್ಗೆ ಜವಾಬ್ದಾರಿ ಹೊಂದುವಿಕೆ ಇವು ಮನುಷ್ಯನು ತಾಳಬೇಕಾಗಿರುವ ಅರ್ಥಪೂರ್ಣ ನಿಲುವುಗಳು.

ಮೂಢನಂಬಿಕೆಗಳನ್ನು ಹೋಗಲಾಡಿಸಿ ಉದಾತ್ತ ಮೌಲ್ಯಗಳನ್ನು ಅಳವಡಿಸುವಲ್ಲಿ ಬುದ್ಧ, ಯೇಸು, ಬಸವ, ಮಾರ್ಕ್ಸ್, ಅಂಬೇಡ್ಕರ್ ಮುಂತಾದ ಮಹಾನ್ ವ್ಯಕ್ತಿಗಳು ನಮಗೆ ಆದರ್ಶವಾಗಿದ್ದಾರೆ. ಬುದ್ಧನು ತನ್ನ ಜ್ಞಾನೋದಯದ ನಂತರ ಪ್ರಚಾರಪಡಿಸಿದ 'ವಿಪಸ್ಸನ' ಮೂಢನಂಬಿಕೆಗಳನ್ನು ಗುರುತಿಸಿ ತೆಗೆದುಹಾಕುವಲ್ಲಿ ಅತ್ಯಂತ ಪರಿಣಾಮಕಾರಿ ಸಾಧನವಾಗಿದೆ. ಅದನ್ನೇ ಜೀವಿಕವು 'ಚೆನ್ನೋಟ' ಎಂದು ಕರೆದು ಅದರ ಅನುಷ್ಠಾನವನ್ನು ೬ ವರ್ಷ ಮೇಲ್ಪಟ್ಟವರೆಲ್ಲರೂ ತಮ್ಮ ಜೀವನದಲ್ಲಿ ಪ್ರತಿನಿತ್ಯ ಅಳವಡಿಸುವ ಅನಿವಾರ್ಯತೆ ಮತ್ತು ಅವಶ್ಯಕತೆಯನ್ನು ಮನಗಂಡಿದೆ. ಉಸಿರಾಟದ ಮೇಲಿನ ಕ್ರಮಬದ್ಧ ಗಮನದಿಂದ ಬೆಳೆಸುವ ಚೆನ್ನೋಟದಿಂದ ಮೂಢನಂಬಿಕೆಗಳ ಬೇರುಗಳನ್ನು ಕಿತ್ತು ಹಾಕಬಹುದು. ವೈಜ್ಞಾನಿಕವಾಗಿ ರೂಢಿಸುವ ಚೆನ್ನೋಟದಿಂದ ಬಾಹ್ಯ ಪ್ರಪಂಚದ ನಿಜ ಸ್ಥಿತಿಯನ್ನೂ ಅರ್ಥ ಮಾಡಿಕೊಳ್ಳಬಹುದು. ಚೆನ್ನೋಟದಿಂದ ನಮ್ಮಲ್ಲಿ ಬೆಳೆಯುವ ಎಚ್ಚರ ಮತ್ತುಅದರಿಂದ ಮೂಡುವ ಒಳ ಹಾಗೂ ಸಮಗ್ರ ದೃಷ್ಟಿಯು ನಮ್ಮನ್ನು ಸಕಲ ಬಂಧನಗಳಿಂದ ಪಾರು ಮಾಡುವುದು. ಬಂಧನ ಮುಕ್ತ ಜೀವನದ ಆವಿಷ್ಕಾರದಲ್ಲಿ ಚೆನ್ನೋಟದ ಮೂಲಕ ನಮ್ಮಲ್ಲಿಯ ಮೂಢನಂಬಿಕೆಗಳನ್ನು ಕಿತ್ತು ಹಾಕೋಣ. ಸಮಗ್ರ, ಸತ್ವಯುತ, ಸಮೃದ್ಧ, ಸುಖೀ ಮಾನವತಾ ಜೀವನವನ್ನು ಎಲ್ಲಾ ಮಾನವರೂ ಅನುಭವಿಸುವಂತಾಗಲಿ.

೬ ಡಿಸೆಂಬರ್ ೨೦೦೨

ಕಿರಣ ಕಮಲ ಪ್ರಸಾದ,

ನಾಗರಭಾವಿ, ಬೆಂಗಳೂರು.

ಮೂಢನಂಬಿಕೆಗಳು

ಯಾವುದೇ ವೈಜ್ಞಾನಿಕ ಆಧಾರ ಇಲ್ಲದ ಒಳ್ಳೆಯ ಉದ್ದೇಶ ಇರದ ಪೊಳ್ಳು ನಂಬಿಕೆಗಳೇ ಮೂಢ ನಂಬಿಕೆಗಳು!

ಮೂಢನಂಬಿಕೆಗಳು ಒಂದಲ್ಲ ಒಂದು ರೀತಿಯಲ್ಲಿ ಪ್ರಪಂಚದ ಎಲ್ಲಾ ದೇಶಗಳಲ್ಲೂ ಇವೆ. ಕೆಲವು ದೇಶಗಳಲ್ಲಿ ಹೆಚ್ಚಾಗಿರ ಬಹುದು. ಕೆಲವು ದೇಶಗಳಲ್ಲಿ ಕಡಿಮೆಯಾಗಿರಬಹುದು. ಇವುಗಳಿಗೆ ಗಂಡು, ಹೆಣ್ಣು, ಸಂಸ್ಕೃತಿ, ಭಾಷೆಗಳ ಭೇದವಿಲ್ಲ. ಆದರೂ ಈ ನಂಬಿಕೆಗಳು ನಮ್ಮ ಭಾರತ ದೇಶದಲ್ಲಿ ಹೆಚ್ಚೆಂದೇ ಹೇಳಬಹುದು.

ಇವುಗಳಲ್ಲಿ ಮುಖ್ಯವಾದುವು ಜಾತೀಯತೆ, ದೇವರು ಮತ್ತು ದೆವ್ವ ಮೈಮೇಲೆ ಬರುವುದು, ಸಹಗಮನ ಪದ್ಧತಿ, ಹೆಣ್ಣು ಮಕ್ಕಳನ್ನು ದೇವರಿಗೆ ಬಿಡುವುದು, ಬೆತ್ತಲೆ ಸೇವೆ.... ಇತ್ಯಾದಿ.

ಜಾತೀಯತೆ

ಮನುಷ್ಯ ಹುಟ್ಟಿನಿಂದ ಯಾವುದೇ ಜಾತಿಯವನಲ್ಲ. ಸೃಷ್ಟಿಯಲ್ಲಿ ಗಂಡು ಮತ್ತು ಹೆಣ್ಣು ಎಂಬ ಎರಡು ಜಾತಿಗಳನ್ನು ಬಿಟ್ಟರೆ, ಉಳಿದಂತೆ ಇಂದಿನ ಹಾಗೆ ಕುಲ, ಜಾತಿ, ಗೋತ್ರ ಯಾವುದೂ ಇರಲಿಲ್ಲ. ಎಲ್ಲರೂ ಒಂದೇ ಆಗಿದ್ದರು. ಇದು ಆದಿ ಮಾನವನ ಕಾಲದಲ್ಲಿ. ಆದರೆ ಕಾಲಾನುಸಾರವಾಗಿ ನಾಗರೀಕತೆ ಬೆಳೆಯತೊಡಗುತ್ತಲೇ, ಸಬಲ ಮತ್ತು ದುರ್ಬಲರ ನಡುವೆ ಅಂತರ ಬೆಳೆಯಿತು. ಬಲಶಾಲಿಗಳಾದವರು ದುರ್ಬಲರನ್ನು ಕೀಳಾಗಿ ಕಾಣ ತೊಡಗಿದರು. ಹಾಗೆ ಕೆಲವು ದೇಶಗಳಲ್ಲಿ ಬೆಳ್ಳಗಿರುವವರು ಮೇಲು, ಕಪ್ಪಗಿರುವವರು ಕೀಳು ಎಂಬ ಭೇದ ಮೂಡ ತೊಡಗಿತು. ಹೀಗೇ ಮೇಲು-ಕೀಳು ಜಾತಿಗಳು ಹುಟ್ಟಿ ಕೊಳ್ಳಲಾರಂಭಿಸಿದವು.

ಇವುಗಳ ಜೊತೆಜೊತೆಗೆ ಹಲವಾರು ಧರ್ಮಗಳೂ ಹುಟ್ಟಿಕೊಂಡು, ಮನುಷ್ಯ ಮನುಷ್ಯನ ಮಧ್ಯೆ ಇರಬೇಕಾದ ಅಂತರವನ್ನು ಹೆಚ್ಚಿಸಿದವು.

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಒಂದು ಕಡೆ ಹೀಗೆ ಹೇಳಿದ್ದಾನೆ. 'ಚಾತುರ್ವರ್ಣ್ಯಂ ಮಯಾ ಸೃಷ್ಟ್ಯ ಗುಣ ಕರ್ಮ ವಿಭಾಗಶಃ' ಅಂದರೆ, ನಾಲ್ಕು ವರ್ಣಗಳನ್ನು ಗುಣ ಹಾಗೂ ಕೆಲಸಕ್ಕೆ ಅನುಗುಣವಾಗಿ ನಾನೇ ನಿರ್ಮಿಸಿದೆ ಎಂದು ಇದರ ಅರ್ಥ. ಬ್ರಾಹ್ಮಣ, ವೈಶ್ಯ , ಕ್ಷತ್ರಿಯ ಮತ್ತು ಶೂದ್ರ ಇವೇ ಆ ನಾಲ್ಕು ವರ್ಣಗಳು. ಅಂದರೆ, ಬ್ರಾಹ್ಮಣರು ಸಕಲ ಜನರನ್ನು ಧರ್ಮ ಮಾರ್ಗದಲ್ಲಿ, ನಡೆಯುವಂತೆ ನೋಡಿಕೊಳ್ಳುವರು.

ಕ್ಷತ್ರಿಯರು ಪ್ರಜೆಗಳನ್ನು ರಕ್ಷಣೆ ಮಾಡುವರು.
ವೈಶ್ಯರು ವ್ಯಾಪಾರ ವೃತ್ತಿಯನ್ನು ಅವಲಂಬಿಸುವರು.
ಹಾಗೂ, ಶೂದ್ರರು ಶ್ರಮದಾನ ಮಾಡುವರು.

ಅಂದರೆ ಈ ನಾಲ್ಕು ವರ್ಗದ ಜನರಲ್ಲಿ ಯಾರೂ ಕೀಳಲ್ಲ ಮತ್ತು ಯಾರೂ ಮೇಲಲ್ಲ. ಎಲ್ಲರೂ ಸರಿಸಮರು!

ಆದರೆ ಕಾಲಕ್ರಮೇಣ ಈ ನಾಲ್ಕು ವರ್ಗಗಳಲ್ಲಿಯೇ ಭೇದಗಳು ಪ್ರಾರಂಭವಾದವು. ತನ್ನ ಬುದ್ಧಿ ಶಕ್ತಿಯಿಂದಲೇ ಮಿಕ್ಕ ಮೂರು ವರ್ಗಗಳು ನಡೆಯಬೇಕು ಎಂದು ಕೊಂಡ ಬ್ರಾಹ್ಮಣ, ಅವರನ್ನು ಕೀಳಾಗಿ ಕಾಣತೊಡಗಿದ!

ಬ್ರಾಹ್ಮಣರ ಬುದ್ಧಿವಂತಿಕೆಯ ನಂತರ ಎರಡನೆಯವನಾದ ಕ್ಷತ್ರಿಯ. ತಾನು ಎಲ್ಲರನ್ನೂ ರಕ್ಷಿಸುವವನೆಂದು, ಬ್ರಾಹ್ಮಣರನ್ನು ಕೂಡಿಕೊಂಡು ವೈಶ್ಯರು ಮತ್ತು ಶೂದ್ರರು ತನಗಿಂತ ಕೀಳೆಂದು ಭಾವಿಸಲಾರಂಬಿಸಿದ!

ವ್ಯಾಪಾರ ವೃತ್ತಿಯನ್ನು ಅವಲಂಬಿಸಿ, ಸುಲಭವಾಗಿ ಸಂಪಾದಿಸುತ್ತಿದ್ದ ವೈಶ್ಯ, ಕ್ಷತ್ರಿಯ ಮತ್ತು ಬ್ರಾಹ್ಮಣರನ್ನು ಅನುಸರಿಸಿ ತನಗೆ ಸಿಕ್ಕಿದ ಶೂದ್ರನನ್ನು ಕೀಳಾಗಿ ಕಾಣತೊಡಗಿದ.

ನಾಲ್ಕು ಕರ್ಮಗಳಿಂದ ಪ್ರಾರಂಭವಾಗಿದ್ದು, ಮೇಲು ಕೀಳು ಎಂಬ ನಾಲ್ಕು ಜಾತಿಗಳಾಗಿ ಪರಿವರ್ತನೆಗೊಂಡವು. ಇದರಲ್ಲಿ ಎಲ್ಲರ ತುಳಿತಕ್ಕೂ ಸಿಕ್ಕು, ಅತ್ಯಂತ ಕೀಳು ಎನ್ನಿಕೊಂಡವನು ಶೂದ್ರನೊಬ್ಬನೆ!

ಆದರೇ, ಕಾಲಕ್ರಮೇಣ ಶೂದ್ರರಲ್ಲಿಯೂ ಹಲವಾರು ಜಾತಿ–ಪಂಗಡಗಳು ಹುಟ್ಟಿಕೊಂಡವು. ಹೀಗೆ, ಉಚ್ಚ ಹಾಗೂ ನೀಚ ಜಾತಿಗಳು ಬೆಳೆದು, ಅದೇ ನಂಬಿಕೆಯಾಗಿ, ಮೂಢನಂಬಿಕೆ ಆಯಿತು. ಉಚ್ಚ ಜಾತಿಯವರು ನೀಚ ಜಾತಿಯನ್ನು ಮುಟ್ಟಿಸಿಕೊಳ್ಳಬಾರದು. ಅವನ ಜೊತೆ ಮಾತನಾಡಬಾರದು. ಅವನನ್ನು ಮನೆಗೆ ಸೇರಿಸಬಾರದು ಎಂಬ ಭೇದಭಾವನೆಯ ಪರಿಣಾಮವಾಗಿ ಅಸ್ಪೃಷ್ಯತೆಯಂತಹ ನೀಚ ಪದ್ಧತಿ ಬೆಳೆದು ಬಂತು!

ಇದರ ಜೊತೆ ಜೊತೆಗೆ ಹಿಂದೂ–ಮುಸ್ಲಿಂ–ಕ್ರಿಶ್ಚಿಯನ್–ಪಾರಸಿ–ಸಿಖ್ಖ್–ಬೌದ್ಧ–ಜೈನ ಎಂದು ಹಲವಾರು ಧರ್ಮಗಳೂ ಹುಟ್ಟಿಕೊಂಡವು! ಹಲವಾರು ಮಹಾತ್ಮರು ಧರ್ಮ ಪ್ರವರ್ತಕರು, ಮಾನವತಾವಾದಿಗಳು ಈ ಜಾತಿ ಪದ್ಧತಿಯನ್ನು ತೊಲಗಿಸಬೇಕೆಂದು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಯಾಕೆಂದರೆ ತಲೆತಲಾಂತರದಿಂದ ರಕ್ತಗತವಾಗಿ ಬಂದಿರುವ ಈ ಮೂಢನಂಬಿಕೆಗಳನ್ನು ತೊಲಗಿಸುವುದು ತುಂಬಾ ಕಷ್ಟದ ಕೆಲಸ.

ನಡೆವ ನೆಲವೊಂದೇ, ಕುಡಿವ ಜಲವೊಂದೇ, ಸುಡುವಾಗ್ನಿಯೊಂದೇ ಇರುತಿರಲು ನಡುವೆ ಭೇದವೆತ್ತಣದಯ್ಯ? ಎಂದಿದ್ದಾರೆ ಮಹಾತ್ಮರು. ಒಬ್ಬ ಮನುಷ್ಯನೇ ಮತ್ತೊಬ್ಬ ಮನುಷ್ಯನನ್ನು ಕೀಳಾಗಿ ಕಾಣುವುದು ತುಂಬಾ ಅವಮಾನಕರ. ಅದು ಮಾನವ ಜಾತಿಗೇ ಶೋಭಿಸುವುದಿಲ್ಲ. ಆದ್ದರಿಂದ, ಒಬ್ಬ ಮನುಷ್ಯನ ಆಚಾರ–ವಿಚಾರ, ನಡೆ–ನುಡಿ ಮುಖ್ಯವೇ ಹೊರತು, ಜಾತಿಯಲ್ಲ. ಈ ಜಾತೀಯತೆ, ಅಸ್ಪೃಶ್ಯತೆಯೆಂಬ ಮೂಢನಂಬಿಕೆಯ ಬೇರನ್ನು ನಾವಿಂದು ಸುಟ್ಟು ಹಾಕಬೇಕಾಗಿದೆ.

ದೇವರು ದೆವ್ವ ಮೈಮೇಲೆ ಬರುವುದು

ಇದೊಂದು ಮೂಢನಂಬಿಕೆಯ ಪರಮಾವಧಿ ಎನ್ನಬಹುದು. ಯಾಕೆಂದರೆ, ನಮ್ಮ ಪುರಾಣ–ಧರ್ಮ–ಸಂಸ್ಕೃತಿಯಲ್ಲಿ ದೇವರ ಅಸ್ತಿತ್ವ ಇದೆ ಎಂದು ಹೇಳುತ್ತಾರೆ ನಿಜ. ಆದರೇ, ಮನುಷ್ಯನ ಮೈಮೇಲೆ ದೇವರು ಬರುತ್ತಾನೆ ಎಂಬ ಉಲ್ಲೇಖ ಎಲ್ಲೂ ಕಂಡುಬರುವುದಿಲ್ಲ. ಇದು, ದೇವರು ದೇವಸ್ಥಾನಗಳ ಬಗ್ಗೆ ನಮ್ಮ ಜನರು ಇರಿಸಿಕೊಂಡಿರುವ ನಂಬಿಕೆ–ಭಯ–ಭಕ್ತಿಗಳನ್ನು ಮನಗಂಡ ಕೆಲವು ಕುತಂತ್ರಿಗಳು, ಸ್ವಾರ್ಥಿಗಳು ಹೂಡಿದ ನಾಟಕ. ದೇವರ ವಿಚಾರದಲ್ಲಿ ಜನರನ್ನು ನಂಬಿಸುವುದು ಸುಲಭ ಎಂದು ತಿಳಿದಿದ್ದ ಕೆಲವು ಪೂಜಾರಿಗಳಿಂದ ಪ್ರಾರಂಭಗೊಂಡ ಇದು ಇಂದು ಹಲವಾರು ದೇವರ ಹೆಸರುಗಳಲ್ಲಿ ನಡೆಯುವ ಒಂದು ಸುಲಿಗೆಯಾಗಿ ಬಿಟ್ಟಿದೆ.

'ಭಯವೇ ಭಕ್ತಿಯ ಮೂಲ' ಎಂದರು ಬಸವಣ್ಣನವರು. ಆದರೇ, ಜನರಲ್ಲಿ ಭಯ ಹುಟ್ಟಿಸಿ ಹೊಟ್ಟೆ ಹೊರೆಯಲಾರಂಭಿಸಿದರು ಕೆಲವರು. ಇಂದಿಗೂ ಮೈ ಮೇಲೆ ದೇವರು ಬರುತ್ತದೆ ಎಂದು ಹೇಳಿಕೊಂಡು ತಿರುಗಾಡುವ ಕಪಟ ವೇಷಧಾರಿಗಳಿದ್ದಾರೆ. ಆದರೆ, ಅವರಾರೂ ಶಾಶ್ವತವಾಗಿರಲಾರರು. ನಾಲ್ಕಾರು ದಿನ ಹಾಗೆ ಹೇಳಿಕೊಂಡು, ನಂತರ ತಮ್ಮ ವರ್ಚಸ್ಸು ಕಳೆದುಕೊಳ್ಳುತ್ತಾರೆ. ಅದನ್ನು ಗಮನಿಸಿದರೆ ಇದೊಂದು ಶುದ್ಧ ಸುಳ್ಳು–ಮೋಸ ಎಂದು ತಿಳಿಯುತ್ತದೆ.

ದೆವ್ವ ಮೈಮೇಲೆ ಬರುವುದೂ ಸಹ ಅಷ್ಟೆ. 'ಸತ್ತ ಮನುಷ್ಯ ದೆವ್ವವಾಗಿ ಬೇರೆಯವರನ್ನು ಕಾಡುತ್ತಾನೆ ಎಂಬುದು ಸುಳ್ಳು. ಈ ನಂಬಿಕೆಗೆ ಯಾವುದೇ ಆಧಾರವಿಲ್ಲ. ಹಿಂದೆ, ಮಾನಸಿಕವಾಗಿ ಬರುವ ಕಾಯಿಲೆಗಳಿಗೆ ಯಾವುದೇ ವೈದ್ಯಕೀಯ ಸೌಲಭ್ಯವಿರಲಿಲ್ಲ. ಅಂತಹ ಸಮಯದಲ್ಲಿ ಯಾವುದೇ ಮನುಷ್ಯ ಮಾನಸಿಕ ಕಾಯಿಲೆಗೆ ತುತ್ತಾದಾಗ, ಅವನ ವಿಚಿತ್ರವಾದ ಹಾವ, ಭಾವ, ವರ್ತನೆಗಳಿಗೆ ಸೂಕ್ತ ಉತ್ತರ ಸಿಗದೇ ಹೋದಾಗ ಮತ್ತು ಕೆಲವು ವ್ಯಕ್ತಿಗಳು ಸತ್ತಾಗ ಅವರನ್ನು ತುಂಬಾ ಮನಸ್ಸಿಗೆ ಹಚ್ಚಿಕೊಂಡಾಗ ಹಾಗೂ ಕನಸಿನಲ್ಲಿ ಸತ್ತ ವ್ಯಕ್ತಿ ಕಂಡುಬಂದಾಗ ಇಂತಹ 'ದೆವ್ವಗಳು ಹುಟ್ಟಿಕೊಂಡವು. ಇಲ್ಲಿ ಮತ್ತೊಂದು ವಿಚಾರ ಗಮನಿಸಬಹುದು.

ಬದುಕಿದ್ದಾಗ ಜನರಿಗೆ ಕ್ರೂರವಾಗಿ ಕಾಣುವವರು, ದುಷ್ಟರು ಹಾಗೂ ಕೊಲೆಯಾದವರು, ವಿಕಾರವಾಗಿ ಸಾವಿಗೆ ತುತ್ತಾದವರು, ಅತ್ಮಹತ್ಯೆ ಮಾಡಿಕೊಂಡವರೇ ದೆವ್ವವಾಗುತ್ತಾರೆ ಎಂಬ ನಂಬಿಕೆಯಿದೆ. ಅದಕ್ಕೆಲ್ಲಾ ವ್ಯಕ್ತಿಯ ಮನಸ್ಸಿನ ಭಯವೇ ಕಾರಣ! ಆ ಭಯವನ್ನು ದೂರ ಮಾಡಿಕೊಂಡರೆ ಅವನು ಸ್ವಾಭಾವಿಕವಾಗಿ ಗುಣವಾಗುತ್ತಾನೆ.

ಆದರೇ, ಅಂತಹ ರೋಗಿಯನ್ನು ಹೆದರಿಸಿ, ಕಾದ ಸಲಾಕೆಯಿಂದ ಬರೆಹಾಕುವುದು, ಕೂದಲು ಕೀಳುವುದು, ಚಪ್ಪಲಿಯಿಂದ ಸುಡುವುದು ಮುಂತಾಗಿ ಹಿಂಸೆಮಾಡುತ್ತಾರೆ. ಆದ್ದರಿಂದ ರೋಗಿಗೆ ಮತ್ತಷ್ಟು ಹಿಂಸೆಯಾಗುತ್ತದೆ.

ಹಲವಾರು ಮಾನಸಿಕ ರೋಗಗಳಂತೆ ಇದೂ ಒಂದು ಎಂದು ತಿಳಿದು ವೈದ್ಯರ ಬಳಿ ಚಿಕಿತ್ಸೆ ಮಾಡಿಸಬೇಕು! ಅಲ್ಲದೆ, ಹಿಂಸೆ ಮಾಡುವುದರಿಂದ ರೋಗ ಉಲ್ಬಣವಾಗಿ, ರೋಗಿ ಶಾಶ್ವತವಾಗಿ ಹಾಸಿಗೆ ಹಿಡಿಯಬಹುದು ಅಥವಾ ಸಾಯಲೂ ಬಹುದು. ಇಂತಹ ಮೂಢನಂಬಿಕೆಗಳನ್ನು ಪ್ರೋತ್ಸಾಹಿಸಬಾರದು.

ಸಹಗಮನ

ಯಾವುದೇ ಗಂಡ ಆಕಸ್ಮಿಕವಾಗಿ ಸತ್ತರೆ, ಅವನ ಶವದೊಂದಿಗೆ ಹೆಂಡತಿಯೂ ಬೆಂಕಿಯಲ್ಲಿ ಬಿದ್ದು ಸಾಯುವುದನ್ನೇ ಸಹಗಮನ ಅಥವಾ ಸತಿಪದ್ಧತಿ ಎನ್ನುತ್ತಾರೆ. ಈ ರೀತಿ ಪತಿಯ ಚಿತೆಯೊಂದಿಗೆ ಸತಿಯೂ ಜೀವಂತವಾಗಿ ಸಾಯುವುದರಿಂದ ಸ್ವರ್ಗ ಸಿಗುತ್ತದೆ ಎಂಬುದು ಈ ಸಹಗಮನದ ಉದ್ದೇಶ ಎನ್ನುತ್ತಾರೆ. ಆದರೆ, ಈ ಪದ್ಧತಿ ಪ್ರಾರಂಭವಾಗಿದ್ದು ಹೀಗೆ.

ಹಿಂದೆ ರಜಪೂತ ಮನೆತನದ ಒಬ್ಬ ರಾಜನಿದ್ದ. ಅವನು ಬಹಳ ವೀರ. ಅವನಂತೆಯೇ ಅವನ ಹೆಂಡತಿ ತುಂಬಾ ಸುಂದರಿಯಾಗಿದ್ದಳು. ಆ ಗಂಡ ಹೆಂಡತಿಯರು ಪರಸ್ಪರ ತುಂಬಾ ಪ್ರೀತಿಸುತ್ತಿದ್ದರು. ಅದರೆ, ಈ ನಡುವೆ ಪಕ್ಕದ ದೇಶದ ರಾಜನೊಬ್ಬ ಅವಳ ಸೌಂದರ್ಯವನ್ನು ಕಂಡು ಮನಸೋತ. ಅವಳನ್ನು ತಾನು ಪಡೆಯಲೇ ಬೇಕೆಂದು ರಜಪೂತ ರಾಜನೊಂದಿಗೆ ಯುದ್ಧ ಮಾಡಿದ. ಯುದ್ಧದಲ್ಲಿ ರಜಪೂತ ರಾಜ ಮರಣ ಹೊಂದಿದ. ಈ ಸುದ್ಧಿ ಅವನ ರಾಣಿಗೆ ತಿಳಿಯಿತು. ಅವಳು ತನ್ನ ಪ್ರೀತಿಯ ಗಂಡನನ್ನು ಕಳೆದುಕೊಂಡ ದುಃಖ ಮತ್ತು ತನ್ನ ಗಂಡನನ್ನು ಕೊಂದವನ ಜೊತೆ ಬದುಕಲು ಸಾಧ್ಯವಿಲ್ಲ ಎಂದು ನಿರ್ಧರಿಸಿದಳು. ಗಂಡನನ್ನು ಸುಡುತ್ತಿದ್ದ ಬೆಂಕಿಯಲ್ಲಿ ತಾನೂ ಬಿದ್ದು ಆತ್ಮಹತ್ಯೆ ಮಾಡಿಕೊಂಡಳು.

ಆ ಕಾಲದಲ್ಲಿ ಹೆಣ್ಣಿಗಾಗಿ ಇಂತಹ ಯುದ್ಧ ನಡೆಯುವುದು ಸಾಮಾನ್ಯವಾಗಿತ್ತು. ಅಂತಹ ಸಂದರ್ಭದಲ್ಲಿ ಅನ್ಯಮಾರ್ಗವಿಲ್ಲದೆ, ತಮ್ಮ ಮಾನ ರಕ್ಷಣೆಗಾಗಿ ಹಲವು ರಾಣಿಯರು ಹೀಗೆ ಮಾಡುತ್ತಿದ್ದರು. ಹೀಗೆ ಸತ್ತವರನ್ನು ಪತಿವ್ರತೆಯರೆಂದು ಕರೆಯಲಾರಂಭಿಸಿದರು. ಬರುಬರುತ್ತಾ ಇದೊಂದು ಪದ್ಧತಿಯೇ ಆಗಿಹೋಯಿತು. ಈ ಪದ್ಧತಿ ಮೂಢ ನಂಬಿಕೆಯಾಗಿ, ಕೆಲವು ಹೆಣ್ಣು ಮಕ್ಕಳು ಸತಿ ಹೋಗುವುದಿಲ್ಲ ಎಂದಾಗ ಬಲವಂತವಾಗಿ ಬೆಂಕಿಗೆ ದೂಡತೊಡಗಿದರು. ಹಾಗೆ ಅವರು ಸಾಯದಿದ್ದರೆ ಮಳೆ–ಬೆಳೆ ಆಗುವುದಿಲ್ಲ ಎಂಬ ನಂಬಿಕೆಯೂ ಬೆಳೆಯಿತು. ಹೀಗೆ, ಇದು ರಾಜಮನೆತನದಿಂದ ಪ್ರಾರಂಭವಾಗಿ

ಸಾರ್ವಜನಿಕರಿಗೂ ಹರಡಿತು. ಸಾಯಲಿಚ್ಛೆಯಿಲ್ಲದ ಎಳೆಯ ವಿಧವೆಯರು ಬಲವಂತವಾಗಿ ಬೆಂಕಿಗೆ ಬಿದ್ದು, ಚೀರುತ್ತಾ ಜೀವಂತವಾಗಿ ಸಾಯುವುದನ್ನು ನೋಡ ಬೇಕಾಗಿರುತ್ತಿತ್ತು.

ಡಾಕ್ಟರ್ ರಾಜಾರಾಮ್ ಮೋಹನ್‌ರಾಯ್ ಎಂಬುವವರು ಈ ಪದ್ಧತಿಯನ್ನು ವಿರೋಧಿಸಿ ಹೋರಾಡಿದರು. ಇದೊಂದು ಮೂಢ ನಂಬಿಕೆಯೆಂದು ಸಾರಿದರು. ಈಗ ಇದು ಕಾನೂನುಬದ್ಧ ಅಪರಾಧವಾದರೂ, ಈಗಲೂ ಈ ಮೂಢ ನಂಬಿಕೆಯನ್ನು ಬಿಡದ ಹಲವು ಜನರಿದ್ದಾರೆ!

ಬೆತ್ತಲೆ ಸೇವೆ

'ಸಂಕಟ ಬಂದಾಗ ವೆಂಕಟರಮಣ' ಎನ್ನುವ ಒಂದು ಗಾದೆಯಿದೆ. ಅಂದರೆ ಮನುಷ್ಯ ಕಷ್ಟ ಬಂದಾಗ ದೇವರನ್ನು ನೆನೆಯುತ್ತಾನೆ ಎಂದರ್ಥ. ಎಲ್ಲಾ ಅನುಕೂಲವೂ ಇರುವಾಗ ದೇವರ ನೆನಪಿರುವುದು ಕಡಿಮೆ. ಆದರೆ, ಮನೆಯಲ್ಲಿ ಯಾರಿಗಾದರೂ ಆರೋಗ್ಯ ತಪ್ಪಿದಾಗ, ಹಣಕಾಸಿಗೆ ತೊಂದರೆಯಾದಾಗ, ಎದುರಿಸಲಾರದ ಗಂಡಾಂತರ ಒದಗಿದಾಗ ದೇವರಿಗೆ ಹರಕೆ ಹೊರುತ್ತಾರೆ. ಹರಕೆಯಲ್ಲಿ ಹಲವಾರು ವಿಧಗಳು. ಹಣ ಮುಡುಪು ಕಟ್ಟುವುದು - ಮಂಡೆ ಬೋಳಿಸುವುದು - ಗಡ್ಡ ಬಿಡುವುದು - ಕೋಳಿ ಕುರಿ ಬಲಿ ಕೊಡುವುದು.... ಹೀಗೆ ಇಂತಹ ಹಲವಾರು ಹರಕೆಗಳಲ್ಲಿ ಬೆತ್ತಲೆ ಸೇವೆಯೂ ಒಂದು!

ಇಂತಹ ಬೆತ್ತಲೆ ಸೇವೆಗೆ ಉತ್ತರ ಕರ್ನಾಟಕದ ಚಂದ್ರಗುತ್ತಿ ಮತ್ತು ಸವದತ್ತಿ ತುಂಬಾ ಪ್ರಸಿದ್ಧವಾಗಿದ್ದವು. ಪ್ರತೀವರ್ಷ ಇಲ್ಲಿ ನಡೆಯುವ ರೇಣುಕಾಂಬೆಯ ಜಾತ್ರೆಯ ದಿನ ಇಂತಹ ಬೆತ್ತಲೆಸೇವೆ ನಡೆಯುತ್ತಿತ್ತು. ಹರಕೆಹೊತ್ತ ಹೆಂಗಸರು ಮಕ್ಕಳು ನದಿಯಿಂದ ದೇವಸ್ಥಾನದ ವರೆಗೂ ಬೆತ್ತಲೆಯಾಗಿ ಹೋಗಿ ಸೇವೆಸಲ್ಲಿಸಬೇಕು. ಎಷ್ಟೋ ಹೆಣ್ಣು ಮಕ್ಕಳಿಗೆ ಇದು ಇಷ್ಟವಿರದಿದ್ದರೂ, ಮನೆಯ ಹಿರಿಯರ ಒತ್ತಾಯ ಮತ್ತು ದೇವರು ಕೋಪಗೊಳ್ಳಬಹುದು ಎಂದು ಹೆದರಿ ಬೆತ್ತಲೆ ಓಡುವುದುಂಟು. ನಿಜವಾಗಿ ಇದೊಂದು ಅವಮಾನಕರ ವಿಚಾರ. ಮಾನಿನಿಯಾದ ಹೆಣ್ಣನ್ನು ಸಾವಿರಾರು ಜನರ ಎದುರು ಬೆತ್ತಲೆ ಓಡಿಸುವುದು ಎಂತಹ ಕ್ರೂರತೆಯಲ್ಲವೆ? ಆದ್ದರಿಂದ ಕೆಲವು ಸ್ವಾರ್ಥ ಸಾಧಕರು ಮತ್ತು ಮೇಲು ಜಾತಿಯವರ ತಂತ್ರವೆಂದು ಅರಿತ ಸರ್ಕಾರದವರು, ಎರಡು ವರ್ಷಗಳಿಂದ ಇಂತಹ ಬೆತ್ತಲೆ ಸೇವೆಯನ್ನು ಸಂಪೂರ್ಣ ನಿಷೇಧಿಸಿದ್ದಾರೆ!

ದೇವದಾಸಿಯರು

ಇದೂ ಕೂಡ ದೇವರ ಹೆಸರಿನಲ್ಲಿ ನಡೆಯುವ ಒಂದು ಕೆಟ್ಟ ಪದ್ಧತಿ, ಕೇವಲ ಹೆಣ್ಣು ಮಕ್ಕಳಿಗಷ್ಟೇ ಸೀಮಿತವಾಗಿರುವ ಇದು, ಹೆಣ್ಣಿನ ಶೋಷಣೆಯೂ ಹೌದು. ತುಂಬಾ ಹಿಂದಿನಕಾಲದಿಂದಲೂ ನಡೆದುಕೊಂಡು ಬಂದಿರುವ ಮೂಢನಂಬಿಕೆಗಳಲ್ಲಿ ಇದೂ ಒಂದಾಗಿದೆ.

ಹೆಣ್ಣು ಮಕ್ಕಳಿಗೆ ಯಾವುದೋ ಕಾರಣಕ್ಕೆ ಹುಷಾರು ತಪ್ಪಬಹುದು. ಸರಿಯಾದ ಚಿಕಿತ್ಸೆಯಿಲ್ಲದೆ ಬದುಕುವುದೇ ಕಷ್ಟವೆಂದಾಗ, ಆಕೆಯನ್ನು ದೇವರಿಗೆ ಬಿಡುವುದಾಗಿ ಹರಕೆ ಹೊರುತ್ತಾರೆ ಹಿರಿಯರು.

ಹರಕೆಯ ಫಲವಾಗಿ ಖಂಡಿತಾ ಬದುಕುವುದು ಸಾಧ್ಯವಿಲ್ಲ. ಆದರೆ ಯಾವುದೇ ಕಾರಣದಿಂದ ಆ ಹೆಣ್ಣು ಮಗಳು ಬದುಕಿದರೂ, ಅವಳು ಪ್ರಾಪ್ತವಯಸ್ಕಳಾದಾಗ, ಅವಳನ್ನು ವಿಧಿವಿಧಾನೋಕ್ತವಾಗಿ ದೇವದಾಸಿ ಮಾಡುತ್ತಾರೆ. ಅವಳು ಊರ ಬಸವಿಯಾಗುತ್ತಾಳೆ. ಇನ್ನೂ ಸರಳವಾಗಿ ಹೇಳುವುದಾದರೇ ಅವಳೊಬ್ಬ ಸೂಳೆ, ದೇವರ ಸೂಳೆ!

ಮತ್ತೆ ಕೆಲವು ಜಾತಿ ಸಂಪ್ರದಾಯಗಳಲ್ಲಿ ಹುಟ್ಟಿದ ಒಂದು ಹೆಣ್ಣನ್ನು ದೇವರಿಗೆ ಬಿಡಲೇಬೇಕು. ಅದು ಮನೆತನದ ಪದ್ಧತಿ! ಹಾಗೆ ಬಿಡಲಿಲ್ಲವೆಂದರೆ, ತಮ್ಮ ಮನೆತನದ ಸರ್ವನಾಶವಾಗುತ್ತದೆ ಎಂಬ ಮೂಢನಂಬಿಕೆ!

ಹೀಗಾಗಿ ಕ್ರೂರ ನಂಬಿಕೆಯಿಂದ ಮನೆ-ಗಂಡ-ಸಂಸಾರ-ಮಕ್ಕಳು ಎಂದು ಕನಸು ಕಾಣುವ ಸಾವಿರಾರು ಹೆಣ್ಣು ಮಕ್ಕಳು, ದೇವರ ಹೆಸರಿನಲ್ಲಿ, ಊರ ಸೂಳೆಯರಾಗಿ ಬದುಕು ಸಾಗಿಸಬೇಕಾಗುತ್ತದೆ. ಅವರಿಗೆ ತಮ್ಮದೇ ಆದ ಸಂಸಾರ ಇರುವುದಿಲ್ಲ. ಸಮಾಜದಲ್ಲಿ ಗೌರವ ಸಿಗುವುದಿಲ್ಲ. ಮನಸ್ಸಿಗೆ ಸುಖ-ಸಂತೋಷ ಯಾವುದೂ ಸಿಗುವುದಿಲ್ಲ. ಗಟ್ಟಿಯಾಗಿರುವ ತನಕ ಸಿಕ್ಕ ಸಿಕ್ಕ ಗಂಡಸರಿಗೆ ಸೆರಗು ಹಾಸಿ ಬದುಕಬೇಕು. ಹುಟ್ಟಿದ ಮಗು ಹೆಣ್ಣಾದರೆ ಬೆಳೆದ ಮೇಲೆ ಅದನ್ನು ಸೂಳೆಯನ್ನಾಗೇ ಮಾಡಬೇಕು. ಗಂಡಾದರೆ ತಲೆಹಿಡಿಯುವ ಕೆಲಸ ಮಾಡಬೇಕು. ಒಟ್ಟಾರೆ ಆ ಮಕ್ಕಳ ಬದುಕೂ ಹೀನಾಯವಾಗಿರುತ್ತದೆ. ಆಕೆಗೆ ವಯಸ್ಸಾದರೆ, ಅವಳ ಕಷ್ಟ ಹೇಳತೀರದು. ನಾನಾ ರೋಗಗಳಿಂದ ನರಳುತ್ತಲೋ, ಭಿಕ್ಷೆ ಬೇಡುತ್ತಲೋ ಬದುಕಬೇಕಾಗುತ್ತದೆ? ಅನಾಥರಾಗಿ ಸಾಯಬೇಕಾಗುತ್ತದೆ. ದೇವರ ಹೆಸರಿನಲ್ಲಿ ನಡೆಯುವ ಇಂತಹ ಶೋಷಣೆ ಮೂಢನಂಬಿಕೆಗಳಿಂದ ಎಷ್ಟೋ ಜನ ಸೂಳೆಯರಾಗುತ್ತಾರೆ.

ಈ ದೇವದಾಸಿ ಮತ್ತು ಬೆತ್ತಲೆ ಸೇವೆಗಳಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ ವಿಚಾರವೊಂದಿದೆ. ಅದೇನೆಂದರೆ ಈ ಮೂಢನಂಬಿಕೆ ಹೆಚ್ಚಾಗಿರುವುದು ಕೇವಲ ಶೂದ್ರ ವರ್ಗದವರಲ್ಲಿ ಮಾತ್ರ. ಅದರಲ್ಲೂ ಮಧ್ಯಮವರ್ಗ ಮತ್ತು ಬಡತನದಲ್ಲಿರುವವರಲ್ಲೇ ಅಧಿಕ. ಆದ್ದರಿಂದ ಇದೊಂದು ಮೇಲ್ವರ್ಗದವರ ಶೋಷಣೆ ಮತ್ತು ಮೂಢನಂಬಿಕೆಯ ಪ್ರಭಾವ ಮಾತ್ರ!

ವಿಧವೆ

ಆದರೆ, ಮೇಲ್ವರ್ಗದವರಲ್ಲೂ ಮೂಢ ನಂಬಿಕೆಯಿಲ್ಲದಿಲ್ಲ. ಅದಕ್ಕೆ ಉದಾಹರಣೆ ಬ್ರಾಹ್ಮಣರಲ್ಲಿ ವಿಧವೆಯರು!

ಹೆಣ್ಣು ಯಾವುದೇ ವಯಸ್ಸಿನಲ್ಲಿ ಗಂಡನನ್ನು ಕಳೆದುಕೊಂಡು ವಿಧವೆಯಾದರೂ, ಆಕೆಗೆ ಕಟ್ಟುಪಾಡುಗಳು ತಪ್ಪಿದ್ದಲ್ಲ. ಗಂಡ ಸತ್ತದಿನವೇ ಅವಳ ಸೌಭಾಗ್ಯವೆಲ್ಲಾ ಮುಗಿದು ಹೋಯಿತು ಎಂದು ತೀರ್ಮಾನಿಸುತ್ತಾರೆ. ಅವಳು ಗಂಡ ಸತ್ತ ದುಃಖದಿಂದಲೇ ಇನ್ನೂ ಚೇತರಿಸಿ ಕೊಂಡಿರುವುದಿಲ್ಲ. ಆಗಲೇ ಅವಳಿಗೆ ಶಿಕ್ಷೆ ಪ್ರಾರಂಭವಾಗುತ್ತದೆ. ಗಂಡ ಸತ್ತನೆಂದರೆ ಅವಳು ನತದೃಷ್ಟೆ–ಪಾಪಿ–ಅಪಶಕುನದವಳು. ಅವಳ ತಲೆಗೂದಲಿನಿಂದ ಒಂದು ಹನಿ ನೀರು ಬಿದ್ದರೂ ಸಹ ಸತ್ತು ಹೋಗಿರುವ ಅವಳ ಗಂಡನು ನರಕಕ್ಕೆ ಬೀಳುವನು ಎಂಬ ನಂಬಿಕೆಯಿಂದ, ಸುಂದರವಾದ ಅವಳ ಕೂದಲನ್ನು ಬೋಳಿಸುತ್ತಾರೆ. ಅವಳ ಮಾಂಗಲ್ಯ ಕಿತ್ತು, ಹೆಣ್ಣಿನ ಅಲಂಕಾರವಾದ ಬಳೆ–ಕುಂಕುಮ, ಹೂವು–ಮೂಗುತಿ–ಓಲೆಗಳನ್ನು ತೆಗೆಸುತ್ತಾರೆ. ಅವಳು ಬದುಕಿರುವವರೆಗೆ ಇನ್ನೆಂದೂ ಅವುಗಳನ್ನು ಧರಿಸುವಂತಿಲ್ಲ. ಕೆಂಪು ಸೀರೆ–ಕುಪ್ಪಸ ತೊಟ್ಟು ತಲೆಯ ಮೇಲೆ ಸೆರಗು ಹೊದ್ದು, ಮನೆಯಲ್ಲೇ ಬಿದ್ದಿರಬೇಕು.

ಗಂಡ ಸತ್ತ ಹೆಂಗಸು ಹೆಚ್ಚಾಗಿ ಮನೆಯಿಂದ ಹೊರಗೆ ಓಡಾಡಬಾರದು. ಪರ ಪುರುಷನನ್ನು ನೋಡಬಾರದು. ಆಕೆ ಯಾವುದೇ ಕಾರಣಕ್ಕೆ ಸಂತೋಷದಿಂದ ನಗಬಾರದು. ಹೊಟ್ಟೆ ತುಂಬಾ ಊಟ ಮಾಡಬಾರದು. ದಿನಕ್ಕೆ ಒಂದೇ ಹೊತ್ತು ತಿನ್ನಬೇಕು. ಉಳಿದಂತೆ ಉಪವಾಸವಿರಬೇಕು. ಅಲ್ಲದೆ, ಹೆಚ್ಚಾಗಿ ಹುಳಿ–ಉಪ್ಪು–ಖಾರ ಹಾಗೂ ಕೊಬ್ಬಿನ ಪದಾರ್ಥಗಳನ್ನು ಸೇವಿಸಬಾರದು ಎಂಬ ದಿಗ್ಬಂಧನ.

ಈ ಎಲ್ಲಾ ನಿಯಮಗಳನ್ನು ಅವಳ ಮೇಲೆ ಹೇರುವ ಕಾರಣವಾದರೂ ಏನು? ಎಂದರೆ, ಆಕೆ ಗಂಡನಿಲ್ಲದ ವಳಾದ್ದಾರಿಂದ ಯಾವುದೇ ಕಾರಣಕ್ಕೂ, ಅವಳು ದೇಹ ತುಂಬಿಕೊಂಡು ಬೆಳೆಯಬಾರದು. ಅವಳಲ್ಲಿ ಲೈಂಗಿಕ ಬಯಕೆಗಳು ಉಂಟಾಗಬಾರದು ಎಂಬುದಷ್ಟೇ ಕಾರಣ.

ಸಂಪ್ರದಾಯಸ್ಥ ಮನೆತನವಾದರೆ, ಬಿಸಿನೀರಿನ ಸ್ನಾನವನ್ನೂ ಸಹ ನಿಷೇಧಿಸಲಾಗುತ್ತದೆ. ಛಳಿ–ಮಳೆ ಏನೇ ಇರಲಿ, ಆಕೆ ತಣ್ಣೀರನ್ನೇ ಉಪಯೋಗಿಸಬೇಕು. ಬಿಸಿ ನೀರೂ ಸಹ ದೈಹಿಕ ಬಯಕೆಯನ್ನು ಅರಳಿಸುತ್ತದೆ ಎನ್ನುವರು! ಆಕೆಯನ್ನು ಕೊರಗಿಸಿ ಕುರೂಪಗೊಳಿಸಿದರೆ, ದೈಹಿಕವಾಗಿ ಪರಪುರುಷರ ಸಂಪರ್ಕಕ್ಕೆ ಅವಳೂ ಬಯಸಲಾರಳು. ಹಾಗೇ, ಬೇರೆ ಗಂಡಸರು ಅವಳನ್ನು ನೋಡಲಾರರು!

ಇನ್ನು ಮದುವೆ ಮುಂಜಿಯಂತಹ ಸಾರ್ವಜನಿಕ ಕಾರ್ಯಕ್ರಮಗಳಿಗೆ, ಶುಭ ಸಮಾರಂಭಗಳಿಗೆ ಅವಳು ಕಾಲಿಡುವಂತೆಯೇ ಇಲ್ಲ. ಯಾವುದೇ ಶಾಸ್ತ್ರ ಸಂಬಂಧವಾದ ವಿಚಾರಗಳಿಗೆ ಮುತ್ತೈದೆಯರೇ ಆಗಬೇಕು. ಆಕೆಯ ಗಂಡ ಕುಡುಕನಾಗಿರಲಿ, ಕಳ್ಳನಾಗಿರಲಿ, ಕೊಲೆಗಡುಕನಾಗಿರಲಿ, ಹಾದರಮಾಡುವವನಾಗಿರಲಿ, ಅವನು ಬದುಕಿದ್ದರೇ ಸಾಕು. ಹೆಂಡತಿಯಾದವಳಿಗೆ ಮುತ್ತೈದೆಯೆಂಬ ಗೌರವ ಅವಳು ಪೂಜಾರ್ಹಳೆಂಬ ನಂಬಿಕೆ!

ಆದರೆ, ಗಂಡನ ಸಾವಿಗೆ ಯಾವುದೇ ರೀತಿಯಲ್ಲಿ ಕಾರಣಳಾಗಿರದ ಹಾಗೂ ತನ್ನ ಜೀವನಾಧಾರವಾದ ಪ್ರೀತಿಯ ಗಂಡನನ್ನು ಕಳೆದುಕೊಂಡು ಕಂಗಾಲಾಗಿರುವ ಹೆಣ್ಣಿಗೆ ಈ ರೀತಿಯ ದೈಹಿಕ ಮತ್ತು ಮಾನಸಿಕ ಶಿಕ್ಷೆ ವಿಧಿಸುವುದರಲ್ಲಿ ಅರ್ಥವಾದರೂ ಏನಿದೆ? ಅದೇನು ಅವಳಾಗಿ ತಂದುಕೊಂಡಿದ್ದೆ? ಅಥವಾ ತಾನೇ ಮಾಡಿದ್ದೆ? ಆದರೂ ಆಕೆಗೆ ಹಲವಾರು ರೀತಿಯ ಶಿಕ್ಷೆ! ಜೊತೆಗೆ ಅವಳೊಂದು ಪಶು ಎಂಬಷ್ಟು ಕೀಳು.

ಮದುಮಗಳಿಗೆ ಮುಂಡೆಯ ಮುಖದರ್ಶನವಾದರೆ ಶುಭವಾಗುವುದಿಲ್ಲ, ಅವಳಿಗೂ ವೈಧವ್ಯ ಪ್ರಾಪ್ತವಾಗುತ್ತದೆ ಎಂಬ ಆಧಾರವಿಲ್ಲದ ನಂಬಿಕೆಯಿದೆ. ವಿಧವೆ ಎಂದರೆ, ಅವಳೊಂದು ಅಪಶಕುನ. ಅವಳು ಹೆಣ್ಣೇ ಅಲ್ಲವೆಂಬಷ್ಟು ಕೀಳಾಗಿ ನೋಡುತ್ತಾರೆ!

ಬ್ರಾಹ್ಮಣ ಸಂಪ್ರದಾಯದಲ್ಲಿ ಇಷ್ಟೊಂದು ಕಟ್ಟು ಪಾಡುಗಳಿವೆಯಾದರೇ, ಉಳಿದ ವರ್ಗಗಳಲ್ಲಿ ತುಸು ಮಟ್ಟಿಗೆ ಕಡಿಮೆ. ಆದರೂ, ಅವಳ ಬಗೆಗಿನ ಅಗೌರವ, ತಿರಸ್ಕಾರ ನಿಜವಾಗಿಯೂ ಅವಹೇಳನಕರವಾದದ್ದು. ಇದೊಂದು ತಿರುಳಿಲ್ಲದ ಮೂಢನಂಬಿಕೆ! ಮನುವಿನ ಕಾಲದಿಂದ ಇಂದಿನವರೆಗೂ ಇದು ನಡೆದು ಬಂದಿರುವ ದುರ್ಗಮ ಹಾನಿ ಹೆಣ್ಣಿನ ಶೋಷಣೆಗೆ ನಿದರ್ಶನವಾದದ್ದು!

ನಮ್ಮ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಬಗ್ಗೆ ಇಂತಹ ಹಲವಾರು ಮೂಢ ನಂಬಿಕೆಗಳಿವೆ. ಹೆಣ್ಣಿನ ಕೂದಲು ತುಂಬಾ ಉದ್ದವಿರಬಾರದು. ಕೂದಲು ಉದ್ದವಿರುವವಳು ಬೇಗ ಮುಂಡೆಯಾಗುತ್ತಾಳೆ. ಅವಳಿಗೆ ಗಂಡನ ಭಾಗ್ಯವಿರುವುದಿಲ್ಲ ಎಂದು ಭಾವಿಸುತ್ತಾರೆ.

ಹೆಣ್ಣಾದವಳಿಗೆ ಉದ್ದವಾದ ಕೇಶರಾಶಿ ಒಂದು ಶೋಭೆ. ಅದರಿಂದ ಅವಳ ಸಾಧಾರಣ ರೂಪ ಕೂಡ ಹೆಚ್ಚು ಶೋಭಾಯಮಾನವಾಗುತ್ತದೆ. ಅಲ್ಲದೆ ಕೂದಲು ಬೆಳೆಯುವುದು, ಅವಳ ದೇಹದಲ್ಲಿ ಉತ್ಪತ್ತಿಯಾಗುವ ಹಾರ್ಮೋನಿನಿಂದ ಬೆಳೆಯುತ್ತದೆಯೇ ಹೊರತು, ಅದಕ್ಕೂ ಯಾವುದೇ ನಂಬಿಕೆ–ಅಪನಂಬಿಕೆಗೂ ಸಂಬಂಧವೇ ಇರುವುದಿಲ್ಲ! ಇದೇ ರೀತಿ ಹೆಣ್ಣಿನ ನೋಟ, ನಡಿಗೆ, ಮೈಮೇಲಿನ ಮಚ್ಚೆಗಳನ್ನೆಲ್ಲಾ ಮೂಢ ನಂಬಿಕೆ ಒರೆಗೆ ಹಚ್ಚಿ ನೋಡುವುದುಂಟು. ಇಂತಹ ಮೂಢನಂಬಿಕೆಯಿಂದ ಎಷ್ಟೋ ಹೆಣ್ಣುಗಳಿಗೆ ಮದುವೆಯಾಗುವ ಭಾಗ್ಯ ಲಭಿಸಿದರೂ, ಗಂಡನ ಮನೆಗೆ ಹೋದನಂತರ, ಯಾವುದೇ ಸಣ್ಣಪುಟ್ಟ ಘಟನೆಗಳು, ತೊಂದರೆಗಳು ನಡೆದರೂ ಅದಕ್ಕೆ ಆಕೆಯ ಕಾಲ್ಗುಣವೇ ಕಾರಣವೆಂದು ಆಕೆಯನ್ನು ಹೊಣೆ ಮಾಡುತ್ತಾರೆ! ನಿಜವಾಗಿಯೂ, ಇದು ಹೆಣ್ಣಿನ ಮೇಲೆ ನಡೆಸುವ ದಬ್ಬಾಳಿಕೆ ಅಥವಾ ಶೋಷಣೆ!

ಬಲಿ

ಮೂಢ ನಂಬಿಕೆಯಲ್ಲಿ ಅಗ್ರಗಣ್ಯಸ್ಥಾನ ಹೊಂದಿರುವುದರಲ್ಲಿ ಮತ್ತೊಂದು ಬಲಿ! ಬಲಿ ಎಂಬ ಶಬ್ದವೇ ತುಂಬಾ ಕ್ರೌರ್ಯದಿಂದ ಕೂಡಿರುವಂತಹುದು. ಯಾವುದೇ ಜೀವಿಯನ್ನು,

ಜೀವಂತವಾಗಿ ಬದುಕಿರುವಾಗಲೇ ಹಿಂಸಿಸಿ ಕೊಲ್ಲುವುದು! ಹಾಗೂ ಅದರಿಂದ ದೇವರನ್ನು ಒಲಿಸಿಕೊಳ್ಳುವುದು!

ನಮ್ಮ ಪುರಾಣ ಪುಣ್ಯ ಕತೆಗಳಲ್ಲಿ, ಕೊಲೆಯನ್ನು ಮಹಾಪಾಪವೆಂದು ಹೇಳಲಾಗಿದೆ. ಯಾವುದೇ ಒಂದು ಜೀವವನ್ನು ಅಂತ್ಯಗೊಳಿಸುವ ಹಕ್ಕು ಮನುಷ್ಯನಿಗಿಲ್ಲ; ಅದು ದೇವರು ಮಾಡುವ, ಮಾಡಬೇಕಾದ ಕೆಲಸ ಎಂದು ಹೇಳುತ್ತಾರೆ. ಅದರಲ್ಲಿ ಜೈನಧರ್ಮದಲ್ಲಿ, ಪ್ರಾಣಹರಣಕ್ಕಿಂತ ಪಾತಕವಾದ ಕೆಲಸ ಬೇರೊಂದಿಲ್ಲ! ಅಹಿಂಸೋ ಪರಮೋಧರ್ಮ! ಎಂಬುದೇ ಅವರ ಮೂಲಮಂತ್ರ. ನಮ್ಮ ಈ ಶತಮಾನದವರಾದ ಗಾಂಧೀಜಿಯವರು ಸಹ ಅಹಿಂಸೆಯನ್ನು ನಂಬಿದವರು!

ದೇವರು ಅಹಿಂಸಾಪರ. ಹಿಂಸೆಯಿಂದ ಅವನೆಂದಿಗೂ ತೃಪ್ತಿಹೊಂದಲಾರ, ಎಂದು ಯಾವುದೇ ಧರ್ಮ ಹೇಳುತ್ತದೆ! ಆದರೆ, ಅದೇ ದೇವರ ಒಲವಿಗಾಗಿ ಬಲಿ ನೀಡುವುದು ಎಷ್ಟೊಂದು ಅಭಾಸ ಅಲ್ಲವೆ? ನಿಜವಾಗಿ ಯಾವುದೇ ದೇವರು-ಧರ್ಮ ಬಲಿಯನ್ನು ಬಯಸುವುದಿಲ್ಲ. ಅದು ಹಿಂಸಾಪ್ರವೃತ್ತಿಯವನಾದ ಮನುಷ್ಯ ತನ್ನ ಪ್ರಯೋಜನ, ಸ್ವಾರ್ಥಕ್ಕಾಗಿ ದೇವರ ಹೆಸರಿನಲ್ಲಿ ಮಾಡುವ ಒಂದು ಕಾರ್ಯವಷ್ಟೆ!

ಯಾವುದೇ ಜೀವಿಗಳು ಜೀವಿಸಲೆಂದೇ ಹುಟ್ಟಿದುವು. ಆದರೆ, ಅವುಗಳನ್ನು ಕೊಂದು ತೃಪ್ತಿಪಡುವುದರಲ್ಲಿ ಅರ್ಥವೇ ಇಲ್ಲ. ಕೊಲ್ಲುವ ಸಮಯದಲ್ಲಿ ಅವುಗಳ ಆರ್ತನಾದ ಎಂತಹವರ ಹೃದಯವನ್ನಾದರೂ ಕಲಕುತ್ತದೆ!

ಇಂತ ಬಲಿಗಳನ್ನು ಹೆಚ್ಚಾಗಿ ಶೂದ್ರ ವರ್ಣದವರೇ ಆಚರಿಸುವುದು. ಹಬ್ಬಗಳಲ್ಲಿ, ಊರಿನಲ್ಲಿ ಮಳೆ ಬರಲಿಲ್ಲವೆಂದಾಗ, ಮನೆಯಲ್ಲಿ ಶಾಂತಿಮಾಡಿಸಬೇಕೆಂದಾಗ ಹೀಗೆ ಹಲವಾರು ರೀತಿಯಲ್ಲಿ ಬಲಿಗಳನ್ನು ಆಚರಿಸುವುದರಿಂದ ಸಮಸ್ಯೆ ಪರಿಹಾರವಾಗುತ್ತದೆ ಎಂಬ ಮೂಢ ನಂಬಿಕೆಯಿದೆ!

ನರಬಲಿ

ಆದರೆ, ಈ ಪಶು, ಪಕ್ಷಿ, ಪ್ರಾಣಿಬಲಿಗಳಂತೆಯೇ 'ನರಬಲಿಗಳನ್ನೂ ಕೊಡುವ ಜನರಿದ್ದಾರೆ. ಇಂತಹವರು ಹೆಚ್ಚಾಗಿ ಶೂದ್ರ ದೇವತೋಪಾಸಕರು! ಅಂದರೆ, ಮಾಟಮಂತ್ರಗಳನ್ನು ಆರಾಧಿಸುವ ಜನ! ಇವರು, ತಾವು ನಂಬಿದ ದೇವತೆಗೆ ಇಂತಿಷ್ಟು ನರಬಲಿಗಳನ್ನು, ಇಂತಿಂಥಹ ಸಮಯದಲ್ಲಿ ನೀಡಿದರೆ ತಮಗೆ ದೇವರು ಒಲಿಯುತ್ತದೆ ಎಂಬ ಮೂಢನಂಬಿಕೆಗೆ ಬಲಿಯಾಗಿರುತ್ತಾರೆ. ಇಂತಹವರ ಕ್ರೂರ ಬಲಿಗೆ ಹೆಚ್ಚಾಗಿ ಏನೂ ಅರಿಯದ ಮುಗ್ಧ ಮಕ್ಕಳೇ ಬಲಿಯಾಗುವುದು. ಕಾಮ, ಕ್ರೋಧವಿಲ್ಲದ ಎಳೆಯ ಮಕ್ಕಳನ್ನು ಬಲಿ ನೀಡಿದರೆ ದೇವತೆ ಬೇಗ ಪ್ರಸನ್ನವಾಗುತ್ತದೆ ಎಂದು ನಂಬಿರುತ್ತಾರೆ.

ಇವರಲ್ಲಿ ಮತ್ತೆ ಕೆಲವರು, ತಾವಷ್ಟೇ ಅಲ್ಲದೆ ಬೇರೆಯವರಿಗೂ ಈ ಮೂಢನಂಬಿಕೆಯನ್ನು ಬೋಧಿಸುವುದುಂಟು. ಬಲಿ ಕೊಟ್ಟರೆ ನಿಧಿಸಿಗುತ್ತದೆ, ದೇವರು ಪ್ರಸನ್ನವಾಗುತ್ತದೆ ಎಂದೆಲ್ಲಾ ನಂಬಿಸಿ, ಗಂಡಹೆಂಡತಿಯನ್ನೋ, ತಾಯಿ ತಂದೆ ಹೆತ್ತ ಮಕ್ಕಳನ್ನೋ ಬಲಿ ಕೊಡುವಂತೆ ಪ್ರೇರೇಪಿಸುತ್ತಾರೆ. ಇಂತಹ ಎಷ್ಟೋ ಪ್ರಕರಣಗಳು ಇಂದಿಗೂ ನಡೆಯುತ್ತಾ ಬಂದಿವೆ.

ಇಂತಹದರಲ್ಲಿ ಲಕ್ಷ್ಮಣಬಾಬಾ ಎಂಬ ವ್ಯಕ್ತಿಯೊಬ್ಬ ನಮ್ಮ ರಾಜ್ಯದಲ್ಲಿಯೇ ನಡೆಸಿದ ಹಲವಾರು ಮಕ್ಕಳ ಕ್ರೂರಬಲಿ ಇಡೀ ಜನಸ್ತೋಮವನ್ನೇ ತಲ್ಲಣಗೊಳಿಸಿತು. ಆತನ ಮೂಢನಂಬಿಕೆಗೆ ಹಲವಾರು ಹಸುಳೆಗಳು ಬಲಿಯಾದರು. ಕೊನೆಗೆ ಅವನನ್ನು ಬಂಧಿಸಿ ಪೋಲಿಸರು ಜೈಲಿಗೆ ಹಾಕಿದರು. ಆದರೆ, ಅವನಿಗೆ ಕೋರ್ಟಿನ ತೀರ್ಪು ಬರುವ ಮೊದಲೇ, ತನ್ನ ಉದ್ಧವಾದ ಕೂದಲಿನಿಂದಲೇ ನೇಣು ಹಾಕಿಕೊಂಡು ಜೈಲಿನಲ್ಲಿಯೇ ಪ್ರಾಣತೆತ್ತ.

ಲಕ್ಷ್ಮಣಬಾಬಾ ಒಬ್ಬ ಮಾತ್ರ ಸತ್ತಿದ್ದಾನೆ. ಆದರೆ, ಇಂತಹ ಹಲವಾರು ಮಂದಿ ಬಾಬಾಗಳು ನಮ್ಮ ದೇಶದಲ್ಲಿದ್ದಾರೆ. ತಮ್ಮ ಮೂಢನಂಬಿಕೆಯಿಂದ, ಸ್ವಾರ್ಥ ಸಾಧಿಸಲು ಹೋಗಿ ಎಷ್ಟೋ ಮಂದಿ ಅಮಾಯಕರನ್ನು ಬಲಿ ತೆಗೆದುಕೊಳ್ಳುತ್ತಾರೆ; ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಇಂತಹವರ ಬಗ್ಗೆ ತುಂಬಾ ಹುಷಾರಾಗಿರಬೇಕು.

ತಂತ್ರಗಳು

ಮತ್ತೆ ಕೆಲವು ಮಂದಿ ಬಾಬಾಗಳಿದ್ದಾರೆ. ಇವರು 'ಬಲಿ' ಗಳಂತಹ ಕ್ರೂರ ಮೂಢನಂಬಿಕೆಯನ್ನು ಅನುಸರಿಸುವುದಿಲ್ಲ ವಾದರೂ, ಮನೆಗೆ ಒದಗಿರುವ ಗಂಡಾಂತರವನ್ನು ನಿವಾರಿಸುವುದಾಗಿ, ಮದುವೆಯಾಗದವರಿಗೆ ಮದುವೆ ಮಾಡಿಸುವುದಾಗಿ, ಬಡವರನ್ನು ಶ್ರೀಮಂತರಾಗಿಸುವುದಾಗಿ ಹೇಳಿಕೊಂಡು ಜನರನ್ನು ವಂಚಿಸುತ್ತಿರುತ್ತಾರೆ. ತಾವು ದೇವರ ಅಪರಾವತಾರವೆಂದು ಮುಗ್ಧ ಜನರನ್ನು ನಂಬಿಸಿ, ಬರಿಗೈಯಿಂದ ಬೂದಿ ಉದುರಿಸುವುದು, ಹಣ ಬರಿಸುವುದು ಇತ್ಯಾದಿ ತಂತ್ರಗಾರಿಕೆ ತೋರಿ ವಂಚಿಸುತ್ತಾರೆ. ವಾಸ್ತವವಾಗಿ ಇದೆಲ್ಲಾ ಅಪ್ಪಟ ಮೋಸ ನಮ್ಮ ಜನರ ಮೂಢನಂಬಿಕೆಗಳನ್ನು ದುರುಪಯೋಗ ಪಡಿಸಿಕೊಂಡು ಇವರು ನಡೆಸುವ ದಂಧೆ.

ಕಷ್ಟಪಟ್ಟು ದುಡಿಯದೇ ಯಾವ ವ್ಯಕ್ತಿಯೂ ಮುಂದುವರಿಯಲಾರ. ಸೂಕ್ತ ಚಿಕಿತ್ಸೆಯಿಲ್ಲದೆ ಯಾವುದೇ ಕಷ್ಟ ಕಾಯಿಲೆಗಳು ವಾಸಿಯಾಗಲಾರವು. ಗಂಡು ಹೆಣ್ಣಿನ ಸಮರ್ಪಕ ಸಂಯೋಗ ಹಾಗೂ ಇಬ್ಬರಲ್ಲೂ ಆರೋಗ್ಯ ಮತ್ತು ಸೂಕ್ತ ವಿರ್ಯಾಣು–ಅಂಡಾಣುಗಳಿಲ್ಲದೆ ಮಕ್ಕಳಾಗುವುದಿಲ್ಲ. ಕೆಲವೊಮ್ಮೆ ಮಕ್ಕಳಾಗುವುದು ನಿಧಾನವಾಗಿಯೂ ಆಗಬಹುದು. ಅಥವಾ ಅಂತಹ ವ್ಯಕ್ತಿಗಳು ಸೂಕ್ತ ಚಿಕಿತ್ಸೆ ಪಡೆದು ಮಕ್ಕಳನ್ನು ಹೊಂದಬಹುದು! ಆದರೆ, ಬಾಬಾಗಳ ಬೂದಿಯಿಂದ, ಆಶೀರ್ವಾದದಿಂದ, ಮಂತ್ರ ಜಲದಿಂದ ಮಕ್ಕಳಾಗುತ್ತವೆ ಎಂಬುದು ಶುದ್ಧ ಸುಳ್ಳು. ಅದು ಮೂಢನಂಬಿಕೆ ಅಷ್ಟೆ!

ಅಷ್ಟೇಕೆ, ಎಷ್ಟೋ ಮಂದಿ ಅಮಾಯಕ ಹೆಂಗಸರು ಇಂತಹ ಬಾಬಾಗಳಿಂದ ಮಕ್ಕಳಾಗುತ್ತವೆ ಎಂದು ನಂಬಿ ಮೋಸ ಹೋಗಿದ್ದಾರೆ. ಅವರ ಅತ್ಯಾಚಾರಕ್ಕೆ ಗುರಿಯಾಗಿದ್ದಾರೆ! ಇದು ಬಹಳಷ್ಟು ಸಮಯದಲ್ಲಿ ಅಂತಹ ಹೆಂಗಸರಿಗೆ ತಿಳಿದೇ ಇರುವುದಿಲ್ಲ. ಯಾಕೆಂದರೆ, ಈ ಬಾಬಾಗಳು ಪೂಜೆ, ಮಂತ್ರ, ವ್ರತ ಎಂದು ನಂಬಿಸಿ ಅವರನ್ನು ಏಕಾಂತಕ್ಕೆ ಸೇರಿಸಿ, ಅಲ್ಲಿ ಆಕೆಯನ್ನು ಸಮ್ಮೋಹನಕ್ಕೆ ಒಳಪಡಿಸಿಯೋ, ತೀರ್ಥ ಪ್ರಸಾದದ ನೆಪದಲ್ಲಿ ನಿದ್ದೆ ಔಷಧಿ ನೀಡಿಯೋ ಅವರಪ್ರಜ್ಞೆ ಇಲ್ಲದಂತೆ ಮಾಡಿ, ನಂತರ ಅತ್ಯಾಚಾರ ಮಾಡುವುದರಿಂದ ಅವರಿಗೆ ಗೊತ್ತಾಗುವುದಿಲ್ಲ. ಗೊತ್ತಾದರೂ ಸಹ ಮಾನ–ಮರ್ಯಾದೆಗೆ ಹೆದರಿ ಮೌನವಾಗುತ್ತಾರೆ. ಹೀಗಾಗಿ, ಗಂಡನಲ್ಲಿ ದೋಷವೇನಾದರೂ ಇದ್ದು, ಹೆಂಡತಿಗೆ ಮಕ್ಕಳಾಗುವ ಸಂಭವವಿದ್ದರೆ ಬಾಬಾಗಳ ಸಂಯೋಗದಿಂದ ಮಕ್ಕಳಾಗಬಹುದು. ನಂತರ ಅದನ್ನೇ, ಈ ಬಾಬಾಗಳು ಪ್ರಚಾರಕ್ಕೆ ಬಳಸಿಕೊಳ್ಳುತ್ತಾರೆ. ಜನರನ್ನು ಮರಳು ಮಾಡುತ್ತಾರೆ! ಈ ತಂತ್ರಗಾರಿಕೆಗೆ ಮುಗ್ಧ ಜನರು ಸುಲಭವಾಗಿ ಬಲಿಯಾಗುವರು!

ಆದ್ದರಿಂದ, ಯಾವ ಮನುಷ್ಯನೂ ದೇವರಲ್ಲ ಎಂಬುದನ್ನು ನಾವು ಅರಿಯಬೇಕು. ಕೇವಲ ಹಣ–ಕೀರ್ತಿ–ಗೌರವಗಳನ್ನು ಸಂಪಾದಿಸಲು ಕೆಲವು ಬುದ್ಧಿವಂತ ಸ್ವಾರ್ಥಿಗಳು ನಡೆಸುವ ಕುತಂತ್ರವಿದೆಂಬುದನ್ನು ಮನಗಾಣಬೇಕು! ಇಂದು ನಾವು ವೈಜ್ಞಾನಿಕವಾಗಿ ತುಂಬಾ ಮುಂದುವರೆದಿದ್ದೇವೆ. ನಮ್ಮ ಪ್ರತಿಯೊಂದು ಸಮಸ್ಯೆಗಳಿಗೂ ಸೂಕ್ತ ಪರಿಹಾರವಿದೆ. ಅದನ್ನು ಉಪಯೋಗಿಸಿಕೊಂಡು ಸೂಕ್ತ ಪರಿಹಾರ ಕಂಡುಕೊಳ್ಳಬೇಕೇ ಹೊರತು, ಮೂಢನಂಬಿಕೆಗಳಿಗೆ ಬಲಿಬೀಳಬಾರದು!

ಲೈಂಗಿಕ ವಿಷಯಗಳಲ್ಲಿ ಮೂಢನಂಬಿಕೆಗಳು

ಹೆಣ್ಣು ಮತ್ತು ಗಂಡಿನ ಸಂಬಂಧ ಹಾಗೂ ಅವರ ಲೈಂಗಿಕ ವಿಚಾರಗಳಲ್ಲಿ, ನಮ್ಮ ಸಮಾಜಕ್ಕೆ ತಿಳುವಳಿಕೆ ತುಂಬಾ ಕಡಿಮೆ. ಕಾರಣ, ತುಂಬಾ ಹಿಂದಿನಿಂದಲೂ ಈ ವಿಷಯವನ್ನು ಸಾರ್ವಜನಿಕವಾಗಿ ಮಾತಾಡುವುದು, ಚರ್ಚಿಸುವುದು ಅಪರಾಧ ಎಂಬ ಮನೋಭಾವ ಬೆಳೆದು ಬಂದಿದೆ. ಇಂತಹ ವಿಷಯಗಳನ್ನು ಏಕಾಂತದ ಹೊರತು ಮನೆಯಲ್ಲಿ ಹಿರಿಯರ ಹಾಗೂ ಮಕ್ಕಳ ಮುಂದೆಯೂ ಸಹ ಮಾತಾಡುವಂತಿಲ್ಲ. ಇದರಿಂದ ಮಕ್ಕಳು ಹಾಳಾಗುತ್ತಾರೆ ಎಂಬ ಭಾವನೆಯಿದೆ. ಇಂತಹ ಭಾವನೆ ಮತ್ತು ತಿಳುವಳಿಕೆಯಿಂದ ಹಲವಾರು ಮೂಢನಂಬಿಕೆಗಳೂ ಹುಟ್ಟಿಕೊಂಡಿವೆ. ಅಂತಹವುಗಳಲ್ಲಿ ಕೆಲವನ್ನು ಉದಾಹರಿಸಬಹುದು.

ನಮ್ಮ ಸಮಾಜದಲ್ಲಿ ಮಕ್ಕಳಾಗದಿರುವುದಕ್ಕೆ ಹೆಣ್ಣೇ ಕಾರಣವೆಂಬ ಮೂಢನಂಬಿಕೆ ಬಹಳಷ್ಟು ಕಡೆ ಈಗಲೂ ಇದೆ. ಎಷ್ಟೋ ಮಂದಿ ಗಂಡಂದಿರು ತಮ್ಮಲ್ಲಿ ಏನೇ ದೋಷವಿದ್ದರೂ, ಅದನ್ನು ಗಣನೆಗೆ ತೆಗೆದುಕೊಳ್ಳದೆ ಮಕ್ಕಳಾಗದಿರಲು ಹೆಣ್ಣೇ ಕಾರಣವೆನ್ನುವುದುಂಟು. ಗಂಡನ

ಮನೆಯ ಹಿರಿಯರೂ ಅದೇ ರೀತಿ ಅಭಿಪ್ರಾಯ ತಳೆಯುತ್ತಾರೆ. ಆಕೆ ಬಂಜೆಯಾದುದರಿಂದಲೇ ಅವಳಿಗೆ ಮಕ್ಕಳಾಗುತ್ತಿಲ್ಲವೆಂದು ಭಾವಿಸಿ, ಎರಡು ಮೂರು ವರ್ಷಗಳು ಕಳೆಯುತ್ತಲೇ, ಮಗನಿಗೆ ಬೇರೆ ಮದುವೆ ಮಾಡಿ ಬಿಡುತ್ತಾರೆ. ಇದೇ ರೀತಿ ಮೂರ್ನಾಲ್ಕು ಮದುವೆ ಮಾಡಿ ಬಿಡುತ್ತಾರೆ. ಇದೇ ರೀತಿ ಮೂರ್ನಾಲ್ಕು ಮದುವೆ ಮಾಡಿ, ಹೆಣ್ಣು ಮಕ್ಕಳ ಭವಿಷ್ಯವನ್ನು ಹಾಳುಮಾಡುವುದುಂಟು. ಕೊನೆಗೂ, ಗಂಡನಿಂದಲೇ ಮಕ್ಕಳಾಗುತ್ತಿಲ್ಲವೆಂದು ಒಪ್ಪಲಾರರು. ಗಂಡಸರು ತಮ್ಮ ದೋಷವನ್ನು ಹುಡುಕಲು ಮುಂದೆ ಹೋಗಲಾರರು. ಅದು ತಮ್ಮ ಪುರುಷತ್ವಕ್ಕೇ ಅವಮಾನವೆಂದು ಬಗೆಯುತ್ತಾರೆ. ಆದರೆ, ಹೆಂಗಸರ ದೋಷ ಕೆಲವು ಸಮಯದಲ್ಲಿ ಇರುವುದು ನಿಜವಾದರೂ ಮಕ್ಕಳಾಗದಿರುವ ಎಲ್ಲಾ ಗಂಡ ಹೆಂಡತಿಯರಲ್ಲೂ ಹೆಣ್ಣು ಮಾತ್ರವೇ ಬಂಜೆಯಾಗಿರಲಾರಳು! ಅದು ಗಂಡನಿಗೂ ಇರಬಹುದು. ಆದ್ದರಿಂದ, ಹೆಣ್ಣನ್ನು ಮಾತ್ರವೇ ಪೂಜೆ ಮಾಡಿಸುವ ಮೂಢನಂಬಿಕೆ ತೊಲಗಬೇಕು! ಅದಕ್ಕಾಗಿ ನುರಿತ ವೈದ್ಯರಿಂದ ಗಂಡ ಹೆಂಡತಿಯರಿಬ್ಬರೂ ಪರೀಕ್ಷೆ ಮಾಡಿಸಿಕೊಂಡಾಗ, ಸೂಕ್ತ ಉತ್ತರ ದೊರೆಯುತ್ತದೆ. ಎಷ್ಟೋ ಸಮಯಲ್ಲಿ ಈ ಇಬ್ಬರಲ್ಲೂ ದೋಷವಿರದೇ, ಬೇರೇ ಕಾರಣಗಳೂ ಇರಬಹುದಾಗಿದೆ. ನಮ್ಮ ಜನರು ಇದನ್ನೂ ಅರಿಯುವಂತಾಗಬೇಕು!

ಅವಿಭಕ್ತ ಕುಟುಂಬ ಪದ್ಧತಿಯಿಂದ ಬೆಳೆದುಬಂದಿರುವ ನಮ್ಮ ಸಮಾಜದಲ್ಲಿ ಹೆಣ್ಣಿಗಿಂತ ಪುರುಷ ಮೇಲು ಎಂಬ ಭಾವನೆ ಆಳವಾಗಿ ಬೇರು ಬಿಟ್ಟಿದೆ. ಹಾಗಾಗಿ, ಅವಳಿಗೆ ಪುರುಷನಿಗಿಂತ ಯಾವುದೇ ಸ್ವಾತಂತ್ರ್ಯ ಕಡಿಮೆ. ಈ ವಿಷಯ ಲೈಂಗಿಕ ಸಂಬಂಧದಲ್ಲಿಯೂ ಅನ್ವಯವಾಗುತ್ತದೆ. ಹೆಣ್ಣು ಪುರುಷನ ವಂಶವನ್ನು ಬೆಳೆಸಲಷ್ಟೇ ಸೀಮಿತವಾದವಳು. ಅದರಲ್ಲಿ ಅವಳ ಕರ್ತವ್ಯವಿರಬೇಕೇ ಹೊರತು, ಬೇರೆ ಯಾವುದೇ ರೀತಿಯ ಆಸೆ–ಆಸಕ್ತಿ–ಬಯಕೆಗಳಿರಬಾರದು ಎಂಬುದು ನಮ್ಮ ಒಂದು ಹೆಣ್ಣು ಗಂಡನ ಜೊತೆ ಬೆರೆತಿರುವಾಗ, ಯಾವುದೇ ಪ್ರತಿಕ್ರಿಯೆ ತೋರಬಾರದು. ಕೇವಲ ಗಂಡನಿಗೆ ಸಹಕರಿಸುವುದಷ್ಟೇ ಕೆಲಸ ಅವಳದು! ಅಂದರೆ, ಗಂಡನಿಗಾಗುವಂತೆ ಬಯಕೆ–ಉದ್ವೇಗಗಗಳು ಅವಳಿಗಾಗಬಾರದು ಎಂದರ್ಥ! ಅವಳು ಹಾಗೇನಾದರೂ ಉದ್ರೇಕ ಗೊಂಡರೆ ತನಗೆ ತೃಪ್ತಿಯಾಗಲಿಲ್ಲ ಎಂದರೆ ಆ ಕ್ಷಣದಿಂದಲೇ ಅವಳ ಗಂಡ ಆಕೆಯನ್ನು ಅನುಮಾನದ ದೃಷ್ಟಿಯಿಂದ ನೋಡಲಾರಂಭಿಸುತ್ತಾನೆ! ಅವಳು ಕಾಮುಕಿ–ಪತಿವೃತೆಯಲ್ಲ. ಅವಳಿಗೆ ತಾನು ತೃಪ್ತಿ ಪಡಿಸಲಾರೆ ಎಂಬ ಸಂಶಯ ಮತ್ತು ಕೀಳರಿಮೆಗೆ ಒಳಗಾಗುತ್ತಾನೆ! ಈ ಒಂದು ಸಮಸ್ಯೆಯಿಂದಲೇ ಆಕೆ ಎಷ್ಟೇ ಒಳ್ಳೆಯವಳಾದರೂ ಅವರ ಸಂಸಾರ ಒಡೆಯಬಹುದು! ಆದ್ದರಿಂದ ಗಂಡನಾದವನು ಹೆಂಡತಿಯನ್ನು ಕೇವಲ ಮಕ್ಕಳನ್ನು ಪಡೆಯುವ ಯಂತ್ರ. ಅವಳು ಲೈಂಗಿಕವಾಗಿ ಉದ್ರಿಕ್ತಳಾಗಬಾರದು ಎಂಬ ಮೂಢನಂಬಿಕೆಯನ್ನು ಮನಸ್ಸಿನಿಂದ ಕಿತ್ತುಹಾಕಬೇಕು!

ಅವಳೂ ತನ್ನ ಹಾಗೇ ಒಬ್ಬ ಮನುಷ್ಯಳು. ತನಗಿರುವಂತೆಯೇ ಅವಳಿಗೂ ಬಯಕೆಗಳಿರುವುದರಲ್ಲಿ ತಪ್ಪೇನಿದೆ? ಪರಸ್ಪರರ ಪ್ರೀತಿ–ಸಾಮರಸ್ಯವೇ ಸಂಸಾರವಾಗಿರುವುದರಿಂದ, ಒಳಿತು–ಕೆಡುಕುಗಳಲ್ಲಿ ಇಬ್ಬರೂ ಸಮಭಾಗಿಗಳು, ಅದರಲ್ಲೂ, ಗಂಡಸಿಗಿಂತ ನಿಧಾನವಾಗಿ ಉದ್ರಿಕ್ತಳಾಗುವುದು ಹೆಣ್ಣಿನ ಪ್ರಕೃತಿ.ಆದ್ದರಿಂದ, ಮೊದಲು ಉದ್ರಿಕ್ತನಾಗುವ ತಾನು, ಅವಳನ್ನೂ ಗಮನದಲ್ಲಿಟ್ಟುಕೊಳ್ಳಬೇಕೇ ಹೊರತು ತನಗೊಬ್ಬನಿಗಾಗಿ ಅಲ್ಲವೆಂಬುದನ್ನು ಮನಗಾಣಬೇಕು! ಹಾಗಾದಾಗ ಯಾವುದೇ ಸಮಸ್ಯೆಗಳು ಬರುವುದಿಲ್ಲ.

ಮತ್ತೊಂದು ಮೂಢನಂಬಿಕೆ ಪುರುಷರ ಲೈಂಗಿಕ ರೋಗಕ್ಕೆ ಸಂಬಂಧಿಸಿದ್ದು. ಗುಟ್ಟಿನ ಕಾಯಿಲೆಗೆ ಒಳಗಾದ ಪುರುಷ, ಇನ್ನೂ ಋತುಮತಿಯಾಗದ ಕನ್ಯೆಯೊಂದಿಗೆ ಸೇರಿದರೆ ರೋಗ ವಾಸಿಯಾಗುತ್ತದೆ ಎಂಬ ಕೆಟ್ಟ ಮೂಢನಂಬಿಕೆಯೊಂದಿದೆ. ಇದು ತುಂಬಾ ಅಮಾನುಷ ಹಾಗು ಅಪಾಯಕಾರಿಯಾದುದು! ಈ ನಂಬಿಕೆಯಿಂದ ಎಷ್ಟೋ ಜನರು ಮುಗ್ಧ ಹುಡುಗಿಯರನ್ನು ನಂಬಿಸಿ ಅತ್ಯಾಚಾರ ವೆಸಗಿದ ಹುಡುಗಿಗೆ ರೋಗ ಅಂಟಿಕೊಳ್ಳುವುದಲ್ಲದೇ, ಆ ಅಮಾಯಕ ಬಾಲೆಯ ಜೀವನವೂ ಹಾಳಾಗುತ್ತದೆ. ಆದ್ದರಿಂದ ಇಂತಹ ಅಧಾರವಿಲ್ಲದ ನಂಬಿಕೆಗೆ ಬಲಿಬೀಳದೇ, ಅಂತಹ ರೋಗಿಗಳು ವೈದ್ಯರನ್ನು ಕಾಣುವುದು ಸೂಕ್ತ.

ಇಲ್ಲವಾದರೆ ಅವರ ಜೀವನಕ್ಕೇ ಅಪಾಯ ಬರಬಹುದು. ಇತಹುದೇ ಸಾವಿರಾರು ಮೂಢನಂಬಿಕೆಗಳು ನಮ್ಮ ಸಮಾಜದಲ್ಲಿ ಬೇರೂರಿವೆ. ಇಂತಹ ಆಧಾರ ರಹಿತ ನಂಬಿಕೆಗಳಿಂದ ದೂರವಿರಬೇಕು. ಕಾಣದ್ದನ್ನು, ಕೇವಲ ಬಾಯಿಂದ ಕೇಳಿದ್ದನ್ನು ನಂಬಬಾರದು. ಯಾಕೆಂದರೆ, ಪ್ರತ್ಯಕ್ಷವಾದರೂ ಪ್ರಮಾಣಿಸಿ ನೋಡಬೇಕು.

ಸತ್ಯವಲ್ಲದ ಯಾವುದೂ ಉತ್ತಮದಲ್ಲ. ಇಂತಹ ಮೂಢನಂಬಿಕೆಗಳು ನಮಗೂ ಅಪಾಯ, ದೇಶಕ್ಕೂ ಅಪಾಯ!

೧೯೯೬

ಬಿ. ಎ. ಮಧು,
ಮೈಸೂರು

ಚೆನ್ನೋಟ

"ಸತ್ಯಸಾಕ್ಷಾತ್ಕಾರದ ಅನುಭವವನ್ನು ಕಂಡುಕೊಳ್ಳುವ ಈ ವಿದ್ಯೆಗೆ 'ವಿಪಸ್ಸನ ಧ್ಯಾನ 'ವೆಂದು ಹೆಸರು. ಸಾಮಾನ್ಯವಾಗಿ 'ಪಸ್ಸನ' ಎಂದರೆ ತೆರೆದ ಕಣ್ಣುಗಳಿಂದ ನೋಡುವುದು ಎಂದರ್ಥ. ಆದರೆ 'ವಿಪಸ್ಸನ' ಎಂದರೆ ವಸ್ತುವು ಹೇಗಿದೆಯೋ ಹಾಗೆಯೇ ಅಂತರ್ದೃಷ್ಟಿಯಿಂದ ನೋಡುವುದೇ ಹೊರತು ಅದು ಹೇಗೆ ತೋರುತ್ತದೆಯೋ ಅದರಂತೆ ಅಲ್ಲ. ಈ ಸಾಧನೆಯಿಂದ ತೋರಿಕೆಯ ಸತ್ಯತೆಯು ಭೇದಿಸಲ್ಪಟ್ಟು ಇಡೀ ಭೌತಿಕ ಮತ್ತು ಮಾನಸಿಕ ರಚನೆಗೆ ಅತೀತವಾದ ಸತ್ಯತೆಯು ಅರಿವಿಗೆ ನಿಲುಕುತ್ತದೆ. ಈ ಸತ್ಯತೆಯ ಅನುಭವವಾದಾಗ ವಿವೇಚನೆಯಿಲ್ಲದೆ ಪ್ರತಿಕ್ರಿಯೆ ತೋರುವ ಪ್ರವೃತ್ತಿಯು ನಿಂತು ಹೊಸ ಸಂಸ್ಕಾರಗಳ ಉತ್ಪತ್ತಿ ನಿಲ್ಲುತ್ತದೆ. ಇದರ ಪರಿಣಾಮವಾಗಿ ಮನಸ್ಸಿನ ಹಳೆಯ ಸಂಸ್ಕಾರಗಳೂ ಪ್ರಕೃತಿ ನಿಯಮಕ್ಕನುಸಾರವಾಗಿ ಹೊರಬಂದು ಕ್ರಮೇಣ ನಶಿಸಿಹೋಗುತ್ತವೆ. ಹೀಗೆ ಎಲ್ಲ ದುಃಖಗಳೂ ದೂರವಾಗಿ ಆನಂದವೇ ಲಭ್ಯವಾಗುತ್ತದೆ.

"ಈ ಸಾಧನೆಯಲ್ಲಿ ಮೂರು ಹಂತಗಳಿವೆ: ಮೊದಲನೆಯ ಅತ್ಯಂತ ಅವಶ್ಯಕವಾದ ಹಂತವೆಂದರೆ 'ಶೀಲ'. – 'ಸದಾಚಾರ'ದ ಐದು ನಿಯಮಗಳನ್ನು ಪಾಲಿಸುವುದು: ಜೀವಹತ್ಯೆ ಮಾಡದಿರುವುದು; ಸುಳ್ಳು ಹೇಳದಿರುವುದು; ಕದಿಯದಿರುವುದು; ಲೈಂಗಿಕ ಸಂಯಮತೆ ಮತ್ತು ಮಾದಕ ವಸ್ತುಗಳನ್ನು ಸೇವಿಸದಿರುವುದು. ಈ ನಿಯಮಗಳಿಗೆ ಬದ್ಧನಾಗಿರುವುದು. ಈ ನಿಯಮಗಳನ್ನು ಪಾಲಿಸದೆ ಇದ್ದಲ್ಲಿ ಇತರರ ಶಾಂತಿ ಮತ್ತು ನೆಮ್ಮದಿಗೆ ಭಂಗವುಂಟಾಗುವುದು ಮಾತ್ರವಲ್ಲದೆ ಅಕುಶಲ ಶಾರೀರಿಕ ಮತ್ತು ವಾಚಿಕ ಕರ್ಮಗಳಿಂದ ನಮ್ಮ ಮನಸ್ಸಿನ ಮಾಲಿನ್ಯವೂ ದೂರವಾಗುವುದಿಲ್ಲ. ಶೀಲದ ಪಾಲನೆಯಿಂದ ಮನಸ್ಸು ಸಾಕಷ್ಟು ಶಾಂತವಾಗಿ ತನ್ನ ಮುಂದಿನ ಕಾರ್ಯವನ್ನು ಕೈಗೊಳ್ಳಲು ಸಿದ್ಧವಾಗುತ್ತದೆ.

"ಸಾಧನೆಯ ಮುಂದಿನ ಹಂತವೇ 'ಸಮಾಧಿ'. ಮನಸ್ಸನ್ನು ಪಳಗಿಸಿ ಅದನ್ನು ಯಾವುದಾದರೂ ಒಂದೇ ವಸ್ತುವಿನ ಮೇಲೆ ದೃಢವಾಗಿ ನಿಲ್ಲುವಂತೆ ಮಾಡಿ ಅದನ್ನು ವಶಪಡಿಸಿಕೊಳ್ಳುವುದು. ಸಾಧಕನ ಸ್ವಾಭಾವಿಕ ಉಸಿರು ಇದಕ್ಕೆ ಅವಲಂಬನೆ. ಸ್ವಾಭಾವಿಕವಾದ ಉಸಿರಾಟದ ಮೇಲೆಯೇ ಸಾಧ್ಯವಾಗುವಷ್ಟು ಕಾಲ ಮನಸ್ಸನ್ನು ನಿಲ್ಲಿಸಲು ಪ್ರಯತ್ನಿಸುವುದು. ಇದು ಉಸಿರಾಟದ ವ್ಯಾಯಾಮವಲ್ಲ; ಅಥವಾ ಉಸಿರನ್ನು ನಿಯಂತ್ರಿಸುವ ಪ್ರಾಣಾಯಾಮವೂ ಅಲ್ಲ. ಮೂಗಿನ ಪ್ರದೇಶದಲ್ಲಿ ಬಂದು ಹೋಗುತ್ತಿರುವ ಉಸಿರಾಟವನ್ನು ಗಮನಿಸುವುದು ಮಾತ್ರ. ಇದರಿಂದ ಮನಸ್ಸು ಉಗ್ರವಿಕಾರ ಭಾವನೆಗಳಿಗೆ ಒಳಗಾಗದೆ ಶಾಂತವಾಗುತ್ತದೆ. ಹಾಗೂ ಅದು ಏಕಾಗ್ರ ಮತ್ತು ಸೂಕ್ಷ್ಮವಾಗಿ ಮುಂದಿನ ಹಂತವಾದ ಅಂತರ್ದೃಷ್ಟಿಯ ಕಾರ್ಯಕ್ಕೆ ನೆರವಾಗುತ್ತದೆ.

" 'ಶೀಲ' – ಸದಾಚಾರ ಜೀವನ ನಡೆಸುವುದು ಮತ್ತು 'ಸಮಾಧಿ' – ಮನಸ್ಸನ್ನು ಹತೋಟಿಗೊಳಪಡಿಸುವುದು; ಈ ಎರಡು ಹಂತಗಳು ನಮಗೆ ಅವಶ್ಯಕವಾಗಿದ್ದು ಪ್ರಯೋಜನಕಾರಿಯಾಗಿಯೇನೋ ಇವೆ. ಆದರೆ ನಮ್ಮ ಸ್ವಂತ ಪ್ರಕೃತಿಯ ಅಂತರ್ದೃಷ್ಟಿಯನ್ನು ಬೆಳಸಿ ಮನಸ್ಸಿನ ವಿಕಾರಗಳನ್ನು ಕಳೆಯುವ ಮೂರನೆಯ ಹಂತಕ್ಕೆ ತಲುಪದಿದ್ದರೆ ಅವು ಬರೀ ಆತ್ಮದಮನಕ್ಕೆ ಎಡೆಮಾಡಿಕೊಡುವುವು. ತನ್ನೊಳಗೆ ಸತತ ಬದಲಾವಣೆಯಾಗುತ್ತಿರುವ ಸಂವೇದನೆಗಳನ್ನು ಕ್ರಮಬದ್ಧವಾಗಿ ಮತ್ತು ಸಮತಾಭಾವದಿಂದ ಗಮನಿಸಿ ತನ್ನ ನಿಜ ಸ್ವರೂಪಾದ ಅನುಭವ ಮಾಡಿಕೊಳ್ಳುವುದೇ ನಿಜವಾದ ವಿಪಸ್ಸನ. ಈ ಮೂರನೆಯ ಹಂತವೇ 'ಪ್ರಜ್ಞೆ'. ಆತ್ಮ ನಿರೀಕ್ಷಣೆಯಿಂದ ಆತ್ಮ ಶುದ್ಧಿ – ಇದೇ ಬುದ್ಧನ ಬೋಧನೆಯ ಪರಾಕಾಷ್ಠೆ. ಇದನ್ನು ಯಾರು ಬೇಕಾದರೂ ಅಭ್ಯಾಸ ಮಾಡಬಹುದು."

ಸತ್ಯನಾರಾಯಣ ಗೋಯೆಂಕಾ, 'ಜೀವನ ಕಲೆ – ವಿಪಸ್ಸನ ಧ್ಯಾನ,' ವಿಪಶ್ಯನ ಧ್ಯಾನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು, ಪುಟಗಳು: ೮ ರಿಂದ ೧೦.